# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2012

ಬೆಲೆ ರೂ.2.50
WPP No. SK/MNG/WPP/69

II ಧಿಯೋ ಯೋನಃ ಪ್ರಚೋದಯಾತ್ II


D.O.P - 15th of every month from Udupi Sorting Office

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-12 ಸಂಚಿಕೆ-12 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.

ಸಂಸ್ಕೃತ ವಾಙ್ಮಯಕ್ಕೆ ಶೃಂಗೇರಿ ಶ್ರೀ ಶಾರದಾ ಪೀಠದ ಕೊಡುಗೆ
– ಡಾ। ಎಚ್.ವಿ.ನರಸಿಂಹಮೂರ್ತಿ,
ಪುಟ-6

ಕನ್ನಡ ಕವಿಕಾವ್ಯ ಪರಿಚಯ-೪ : ಭಕ್ತ ಕವಿ ಪುರಂದರ ದಾಸರು
– ಹರಿದಾಸ ಮ.ನಾ.ಹೆಬ್ಬಾರ
ಪುಟ-6



ಮಿಸ್ ನಿದ್ರಾ!
– ವೈ. ಮೋಹನ ರಾವ್
ಪುಟ-8

ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ
-ಡಾ। ವೈ. ಸುದರ್ಶನ ರಾವ್
ಪುಟ-9

## ಅಮ್ಮ-ಜೋಕುಳ್ನೋ ಪೊರ್ಲುದೊ ಕೂಟ

ದಿ.4-11-2012ನೇ ರವಿವಾರ ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ಮಹಿಳಾ ವೇದಿಕೆಯ ವತಿಯಿಂದ 'ಅಮ್ಮ-ಜೋಕುಳ್ನೋ ಪೊರ್ಲುದ ಕೂಟ' ಎಂಬ ವಿಶಿಷ್ಟ ಕಾರ್ಯಕ್ರಮವು ಪಡುಬಿದ್ರಿಯ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ನಡೆಯಿತು. ಐದು ಮಂದಿ ಮಾತೆಯರು ತಮ್ಮ ಪುಟಾಣಿ ಮಕ್ಕಳೊಡನೆ ದೀಪ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟನೆಗೊಂಡಿತು. ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ಹಾಗೂ ಮಕ್ಕಳ ಪೋಷಕರಿಗೆ ಅಪರಾಹ್ನ ಘಂಟೆ 1-30ರವರೆಗೆ ವಿವಿಧ ರೀತಿಯ ಅದೃಷ್ಟದ ಆಟಗಳನ್ನು ನಡೆಸಲಾಯಿತು. ಎಲ್ಲೂರಿನ ಶ್ರೀಯುತ ರಾಕೇಶ್ ರಾವ್ ಹಾಗೂ ಶ್ವೇತ ರಾವ್ ಇವರ ಪುಟಾಣಿ ಕಂದ ಮಾಸ್ಟರ್ ಮೋಹಿತ್ ಬಕೆಟಿಗೆ ಚೆಂಡು ಹಾಕುವುದರ ಮೂಲಕ ಸ್ಪರ್ಧೆಗೆ ಚಾಲನೆ ನೀಡಿದನು.

ಮಕ್ಕಳ ಹಾಗೂ ಪೋಷಕರ ವಯಸ್ಸಿಗನುಗುಣವಾಗಿ ಸುಮಾರು 24 ವಿವಿಧ ಅದೃಷ್ಟದ ಸ್ಪರ್ಧೆಗಳಿದ್ದವು. ಮಧ್ಯಾಹ್ನದ ಭೋಜನದ ಬಳಿಕ ಸಮಾರೋಪ ಸಮಾರಂಭವನ್ನು ನಡೆಸಿ ವಿಜೇತರಿಗೆ ಬಹುಮಾನ ನೀಡಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಎರ್ಮಾಳಿನ ನಿವೃತ್ತ..



ಮುಖ್ಯೋಪಾಧ್ಯಾಯಿನಿ ಶ್ರೀಮತಿ ಲಲಿತಾ ಪ್ರಭಾಕರ ರಾವ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪಡುಬಿದ್ರಿಯ ಶ್ರೀಮತಿ ವಸಂತಿ ಪಟ್ಟಾಭಿರಾಮ ಸ್ವಾಮಿ, ಬೆಳ್ಮಣ್ಣಿನ ಶ್ರೀಮತಿ ಶಶಿಕಲಾ ಚಂದ್ರಶೇಖರ್ ರಾವ್ ಹಾಗೂ ಮಕ್ಕಳ ಪ್ರತಿನಿಧಿಯಾಗಿ ನಂದಿಕೂರಿನ ಕುಮಾರಿ ಪೂಜಾ ಇವರು ಭಾಗವಹಿಸಿ, ತಮ್ಮ ಮೆಚ್ಚುಗೆ

(...3ನೇ ಪುಟಕ್ಕೆ)

## ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕ ಮಹಾಸಭೆ





ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕ ಮಹಾಸಭೆಯು ತಾ.02-12-2012 ರವಿವಾರ ದಂದು ಶ್ರೀಸಭಾದಲ್ಲಿ ಜರುಗಿತು. ಸಾಮೂಹಿಕ ಲಲಿತಾ ಸಹಸ್ರನಾಮದ ನಂತರ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮೊದಲಿಗೆ ಶ್ರೀಸಭಾದ ಅಧ್ಯಕ್ಷರಾದ ಶ್ರೀ ಎನ್.ಕೆ.ಜಗನ್ನಿವಾಸ ರಾವ್ ರವರು ಸಭಾದ ಆಡಳಿತ ಮಂಡಳಿಯ ಸದಸ್ಯರನ್ನು ಹಾಗೂ ಸದಸ್ಯರನ್ನು ಸ್ವಾಗತಿಸಿದರು. ಕಾರ್ಯದರ್ಶಿಯವರಾದ ಶ್ರೀ ಕರುಣ್‌ರಾವ್ ಬೆಳ್ಳೆಯವರು 2011-12ನೇ ಸಾಲಿನ ವರದಿಯನ್ನು ಮಂಡಿಸಿದರು. ಸದಸ್ಯರ ಸಂದೇಹಗಳಿಗೆ ಸಮಾಧಾನಕರ ಉತ್ತರಗಳನ್ನು ನೀಡಿ ವರದಿಗಳನ್ನು ಹಾಗೂ 2012-13 ಅಂದಾಜು ಆಯವ್ಯಯ ಪಟ್ಟಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಶ್ರೀಸಭಾದ ಲೆಕ್ಕ ಪರಿಶೋಧಕರಾದ ಶ್ರೀ ಕೆ. ನಾಗರಾಜ ಶರ್ಮರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ ಹಿರಿಯ ವಿದ್ವಾಂಸ ವಾಚಸ್ಪತಿ ಕುರಿಯ ಆತ್ಮಾರಾಮ ಶಾಸ್ತ್ರಿ, ವಿಮಾನ ನಿಲ್ದಾಣ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಶ್ರೀ ಎಂ.ಆರ್. ವಾಸುದೇವ ಹಾಗೂ ಅಪ್ರತಿಮ ಎಳೆಯ ನೃತ್ಯಗಾತಿ ಪೂರ್ವಿ ರಾವ್‌ರವರನ್ನು ಸನ್ಮಾನಿಸಲಾಯಿತು. ನಂತರ ಮುಂದಿನ 3 ವರ್ಷದ

(...3ನೇ ಪುಟಕ್ಕೆ)



## ಶ್ರೀ ಶಾರದಾ ದೇವಸ್ಥಾನ

**ಕುಂಜಿಬೆಟ್ಟು, ಶಾರದಾ ನಗರ, ಉಡುಪಿ-576 102**

**ಶ್ರೀಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತಾಭಿಮಾನಿಗಳ ಅಪೇಕ್ಷೆಯಂತೆ ತಾ.25-12-2012ನೇ ಮಂಗಳವಾರ**

## ಸಾಮೂಹಿಕ ಚಂಡಿಕಾಯಾಗವು

ನಡೆಯಲಿರುವುದು.

**ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತ ಬಾಂಧವರೆಲ್ಲರೂ ಪಾಲ್ಗೊಂಡು ಶ್ರೀ ದುರ್ಗಾಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

D ಚಂಡಿಕಾಯಾಗದ ಕರ್ತೃಗಳಾಗಲಿಚ್ಛಿಸುವವರು ದೇವಸ್ಥಾನದ ಅರ್ಚಕರ ಅಥವಾ ಶ್ರೀಶಾರದಾ ಮಂಟಪದ ಮ್ಯಾನೇಜರವರಲ್ಲಿ ರೂ.300/-ನ್ನು ನೀಡಿ ರಶೀದಿ ಪಡೆದುಕೊಳ್ಳಬೇಕಾಗಿ ವಿನಂತಿ.

D ಯಾಗಕ್ಕೆ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಗಂಧ, **ಹತ್ತಿ ನೂಲಿನ ಅಥವಾ ರೇಷ್ಮೆಯ** ರವಿಕೆ ಕಣ, ಸೀರೆ, ಯಾಗ ದ್ರವ್ಯಗಳು, ಸಮಿತ್ತು, ಪುಷ್ಪ, ತುಳಸಿ ತಂದಲ್ಲಿ ಯಾಗ ದೇವತೆಗೆ ಅರ್ಪಿಸುವ ಅವಕಾಶವಿದೆ.

D ಸೇವಾ ಕರ್ತೃಗಳು ಬೆಳಿಗ್ಗೆ ಗಂಟೆ 8-00ಕ್ಕೆ ಯಾಗ ಸಂಕಲ್ಪಕ್ಕಾಗಿ ಉಪಸ್ಥಿತರಿರಬೇಕಾಗಿ ವಿನಂತಿ. ಗಂಟೆ 12-00ಕ್ಕೆ ಯಾಗದ ಪೂರ್ಣಾಹುತಿ ನಡೆಯಲಿದೆ.

ವಿ.ಸೂ. : *ಕರ್ತೃಗಳಿಗೆ ಪ್ರತ್ಯೇಕವಾಗಿ ಯಾಗ ಪ್ರಸಾದ ನೀಡುವ ವ್ಯವಸ್ಥೆ ಇದೆ. (ರಶೀದಿ ತೋರಿಸಿ ಪಡೆದುಕೊಳ್ಳಬಹುದು) ಉಪಸ್ಥಿತಿ ಸಾಧ್ಯವಿಲ್ಲದ ಕರ್ತೃಗಳು ಮರುದಿನ ರಶೀದಿ ತೋರಿಸಿ ಶಾರದಾ ಮಂಟಪದ ಮ್ಯಾನೇಜರರಿಂದ ಪ್ರಸಾದ ಪಡೆದುಕೊಳ್ಳಬಹುದು.*

**- ವ್ಯವಸ್ಥಾಪಕರು.**

## 2013-ಹೊಸ ವರ್ಷದ ಶುಭಾಶಯಗಳು

**ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸಿದ ಶ್ರೀನಿಧಿ ಗ್ರಾಫಿಕ್ ಟೆಕ್, ಮಣಿಪಾಲ ಮತ್ತು ಅಗ್ರಹಾರ ಆಫ್‌ಸೆಟ್ ಉಡುಪಿ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ ''2013-ಹೊಸ ವರ್ಷ'' ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.**

**-ಸಂಪಾದಕ ಮಂಡಳಿ**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

**ರೇರೇ ಕೋಕಿಲ ಮಾಭಜ ಮೌನಂ**
**ಕಿಂಚಿದುರಂಚಯ ಪಂಚಮರಾಗಂ ।**
**ನೋ ಚೇತ್ತ್ವಾಮಿಹ ಕುಹುಕೋ ಜಾನೀತ ಕಾಕ**
**ಕದಂಬ ಕಂಪಿತೇ ಚೂತೇ ॥**

ಓ ಕೋಗಿಲೆಯೇ, ಸುಮ್ಮನಿರಬೇಡ. ನಿನ್ನ ಸ್ವರ ಏನಂತ ತೋರಿಸು. ಇಲ್ಲದಿದ್ದರೆ ಈ ಕಾಗೆಗಳ ಗುಂಪಿನಲ್ಲಿ ನಿನ್ನನ್ನು ಯಾರು ಅರಿತಾರು? ಮುರ್ಖರ ಗುಂಪಿನಲ್ಲಿರುವ ವಿದ್ವಾಂಸನು ಮಾತನಾಡದಿದ್ದರೆ ಪ್ರಕಾಶವಾಗಿರಲಾರನು.

★★★★

**ಚಲಂ ವಿತ್ತಂ ಚಲಂ ಎತ್ತಂ ಚ**
**ಜೀವಿತಯ್‌ವ್ವನಂ ।**
**ಚಲಾಚಲಮಿದಂ ಸರ್ವಂ ಕೀರ್ತಿರ್ಯಸ್ಯ**
**ಸ ಜೀವತಿ ॥**

ಮನಸ್ಸು ಸ್ಥಿರವಲ್ಲ. ಹಣವು ನಿತ್ಯವಲ್ಲ. ಪ್ರಾಣವಿರುವುದಿಲ್ಲ. ಯ್‌ವನವು ಶಾಶ್ವತವಲ್ಲ. ಎಲ್ಲವೂ ಅಸ್ಥಿರವಾದದ್ದೇ. ಆದರೆ ಯಾವನು ಕೀರ್ತಿಸಂಪನ್ನನೋ ಅವನು ಬದುಕಿ ಇರುತ್ತಾನೆ.


★★★★

**ಪ್ರಿಯವಾಕ್ಯ ಪ್ರದಾನೇನ ಸರ್ವೇ**
**ತುಷ್ಯಂತಿ ಜಂತವಃ ।**
**ಸಸ್ಮಾತ್ತದೇವ ವಕ್ತವ್ಯಂ ವಚನೇ**
**ಕಾ ದರಿದ್ರತಾ ॥**

ಒಳ್ಳೆಯ ಮಾತಿನಿಂದ ಎಲ್ಲ ಜೀವಿಗಳೂ ಖುಷಿ ಪಡುತ್ತವೆ. ಆದ್ದರಿಂದ ಯಾವಾಗಲೂ ಪ್ರಿಯವಾದ ಮಾತನ್ನೇ ಆಡಬೇಕು. ಮಾತಿಗೇಕೆ ಬಡತನ?

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ದಂತವಕ್ತ್ರನ ಸಂಹಾರವಾಗುತ್ತಲೆ ಅವನ ತಮ್ಮನಾದ ವಿದೂರಥನು ಕ್ರೋಧೋದ್ಧತನಾಗಿ ಶ್ರೀ ಕೃಷ್ಣನನ್ನು ಆಕ್ರಮಿಸಿದನು. ತನ್ನ ಬಾಣಗಳಿಂದ ಭಗವಂತನನ್ನು ಗಾಯಗೊಳಿಸಿದನು. ಆಗ ಪರಮಾತ್ಮನು ತನ್ನ ಚಕ್ರದಿಂದ ಕಿರೀಟ ಕುಂಡಲ ಯಕ್ತವಾದ ಅವನ ತಲೆಯನ್ನು ಕಡಿದು ಹಾಕಿದನು. ಅನಂತರ ಶ್ರೀ ಕೃಷ್ಣನು ತನ್ನ ಪರಿವಾರದವರ, ಪ್ರಜೆಗಳ ಜಯಘೋಷದೊಂದಿಗೆ ದ್ವಾರಕೆಯನ್ನು ಪ್ರವೇಶಿಸಿದನು. ಹೀಗೆ ಲೀಲಾಮಾನುಷ ವಿಗ್ರಹನಾದ ಶ್ರೀ ಹರಿಯು ಅನೇಕಾನೇಕ ಲೀಲೆಗಳನ್ನು ತೋರಿಸುತ್ತಿದ್ದನು.

ಶ್ರೀ ಕೃಷ್ಣನು ಗುರುಕುಲದಲ್ಲಿದ್ದಾಗ ಅವನಿಗೊಬ್ಬ ಬ್ರಾಹ್ಮಣ ಸಹಪಾಠಿಯಿದ್ದನು. ಅವನ ಹೆಸರು ಸುದಾಮ. ಆದರೆ ಕುಚೇಲ ನೆಂದೇ ಪ್ರಸಿದ್ಧನಾಗಿದ್ದನು. ಅವನು ಲೌಕಿಕ ಜೀವನದಲ್ಲಿ ಅನಾಸಕ್ತನಾಗಿದ್ದನು. ಅವನ ಮನಸ್ಸು ಯಾವಾಗಲೂ ಬ್ರಹ್ಮ ಚಿಂತನೆಯಲ್ಲಿ ಮುಳುಗಿತ್ತು. ಕರ್ತವ್ಯವೆಂದು ಗೃಹಸ್ಥನಾಗಿದ್ದನು. ಮನೆ ತುಂಬ ಮಕ್ಕಳೂ ಇದ್ದವು. ಇದರಿಂದ ಅವನ ಬಡತನ ಉಲ್ಬಣ ಗೊಂಡಿತ್ತು. ಅವನಾಗಲೀ, ಅವನ ಹೆಂಡತಿ ಮಕ್ಕಳಾಗಲೀ ಹಸಿವಿನಿಂದ ಅಸ್ಥಿಪಂಜರಗಳಾಗಿದ್ದರು. ಆದರೂ ಭಗವದ್ಭಕ್ತಿಯಲ್ಲಾಗಲೀ, ಸ್ಥಿತ ಪ್ರಜ್ಞೆತೆಯಲ್ಲಾಗಲೀ ಸಂಪದ್ಭರಿತರಾಗಿದ್ದರು. ಆದುದರಿಂದ ಯದೃಚ್ಛಾಲಾಭಸಂತುಷ್ಟರಾಗಿದ್ದರು. ಆದರೂ ಒಂದು ದಿನ ಹಸಿದ ಮಕ್ಕಳ ಸಂಕಟವನ್ನು ನೋಡಲಾಗದೆ ಅವನ ಹೆಂಡತಿ ಹೇಳಿದಳು, ''ಭಗವಂತನ ಅವತಾರವಾದ ಶ್ರೀ ಕೃಷ್ಣನು ನಿಮ್ಮ ಸಹಪಾಠಿಯೆಂದು ಹೆಮ್ಮೆ ಪಡುತ್ತಿರುತ್ತೀರಿ. ನಾವೂ ಅವನ ಭಕ್ತರೇ. ಹೀಗಿರುವಾಗ ನೀವೇಕೆ ಆ ಲಕ್ಷ್ಮೀಪತಿಯಿಂದ ಸಹಾಯ ಕೇಳಬಾರದು? ದೊಡ್ಡ ಐಶ್ವರ್ಯಬೇಡವಾದರೂ ತುತ್ತು ತುತ್ತಿಗೂ ಬವಣೆ ಪಡುವ ಸ್ಥಿತಿಯಿಂದ ಅವನು ನಮ್ಮನ್ನು ಪಾರು ಮಾಡಲಾರನೇ? ನಿಮ್ಮ ಬೇಡಿಕೆಯನ್ನು ಖಂಡಿತವಾಗಿಯೂ ತಿರಸ್ಕರಿಸಲಾರನು''.

ಆಗ ಸುದಾಮನೆಂದನು, ''ಪ್ರಿಯೆ, ಆ ಮೊಕ್ಷಪ್ರದನಾದ ದೇವನಲ್ಲಿ ಲೌಕಿಕ ಸಂಪತ್ತನ್ನು ಕೇಳುವುದು ಬುದ್ಧಿಹೀನತೆಯಲ್ಲವೇ? ನನ್ನ ಸ್ನೇಹವನ್ನು ಇಂತಹ ಅಲ್ಪ ಪ್ರಯೋಜನಕ್ಕೆ ದುರುಪಯೋಗ ಪಡಿಸಿಕೊಳ್ಳುವುದೇ'' ? ''ಹಾಗಲ್ಲ. ನಮಗೆ ನಮ್ಮ ಬಡತನದ ಚಿಂತೆಯಿಂದಾಗಿ ಭಗವಚ್ಚಿಂತನೆಗೆ ಕಷ್ಟವಾಗುತ್ತದೆ. ದಯವಿಟ್ಟು ಭಗವಂತನಲ್ಲಿಗೆ ಹೋಗಿರಿ'' ಎಂದಳು ಅವನ ಹೆಂಡತಿ. ಅವಳ ತರ್ಕದಲ್ಲಿ ಔಚಿತ್ಯವಿದೆಯೆಂದು ಸುದಾಮನಿಗೆ ಅನಿಸಿತು. ಅವನು ಶ್ರೀ ಕೃಷ್ಣನಲ್ಲಿಗೆ ಹೋಗಲು ನಿಶ್ಚಯಿಸಿದನು. ಭಗವಂತನನ್ನು ಸಾಕ್ಷಾತ್ ನೋಡಿದ ಹಾಗೂ ಆಯಿತು, ಒಂದು ಸಣ್ಣ ಲೌಕಿಕ ಸ್ವಾರ್ಥವನ್ನು ಸಾಧಿಸಿಕೊಂಡ ಹಾಗೂ ಆಯಿತು ಎಂದು ಯೋಚಿಸಿದನು. ಆದರೆ ಮಹಾತ್ಮರ ದರ್ಶನಕ್ಕೆ ಹೋಗುವಾಗ ಬರಿಗೈಯಲ್ಲಿ ಹೋಗುವುದು ಸಂಸ್ಕೃತಿಯಲ್ಲವಲ್ಲ? ಕೃಷ್ಣನಿಗೆ ಕಾಣಿಕೆ ಕೊಡಲು ಮನೆಯಲ್ಲೇನಾದರೂ ಇದೆಯೇ ಎಂದು ಸುಧಾಮನು ವಿಚಾರಿಸಿದನು. ಅವನ ಹೆಂಡತಿ ಅಲ್ಲಲ್ಲಿ ಬೇಡಿ ನಾಲ್ಕು ಮುಷ್ಟಿ ಅವಲಕ್ಕಿಯನ್ನು ತಂದು ಅವನ ಹರಕಲು ಉತ್ತರೀಯದ ತುದಿಯಲ್ಲಿ ಕಟ್ಟಿಕೊಟ್ಟಳು. ಅದನ್ನು ತೆಗೆದು ಕೊಂಡು ದ್ವಾರವತಿಗೆ



ಹೋದನು. ಅಲ್ಲಿ ಅದ್ಭುತವಾದ ಪ್ರಾಕಾರದೊಳಗೆ ಶ್ರೀಕೃಷ್ಣನ ಹದಿನಾರು ಸಾವಿರದ ಒಂದು ನೂರು ರಾಣಿಯರ ಅರಮನೆಗಳಿದ್ದವು. ಅವುಗಳಲ್ಲಿ ಹೆಚ್ಚು ಅಲಂಕೃತವಾದ ಅರಮನೆಯೊಳಗೆ ಸುದಾಮನು ಪ್ರವೇಶಿಸಿದನು. ಭಗವಂತನ ಅರಮನೆಗೆ ಹೋಗಲು ಬ್ರಾಹ್ಮಣರಿಗೆ ಮುಕ್ತ ಅವಕಾಶವಿದ್ದುದರಿಂದ ಯಾರೂ ಅವನನ್ನು ತಡೆಯಲಿಲ್ಲ. ಶ್ರೀ ಕೃಷ್ಣನು ರುಕ್ಮಿಣಿಯ ಪರ್ಯಂಕದ ಮೇಲೆ ಕುಳಿತಿದ್ದನು. ದೂರದಿಂದ ಬರುತ್ತಿರುವ ಕುಚೇಲನನ್ನು ಕಂಡು ಭಗವಂತನು ದಡಕ್ಕನೆ ಮಂಚದಿಂದಿಳಿದು ಅವನ ಕಡೆಗೆ ಧಾವಿಸಿ ಬಂದನು. ಆಶ್ಚರ್ಯದಿಂದ ಮೂಕನಾಗಿದ್ದ ಅವನನ್ನು ಗಾಢವಾಗಿ ಆಲಿಂಗಿಸಿಕೊಂಡನು. ಕಮಲನಯನನ ಕಣ್ಣುಗಳಿಂದ ಆನಂದಭಾಷ್ಪ ಗಳು ಉದುರಿದವು. ತನ್ನ ಸತೀರ್ಥ್ಯನ ಕೈ ಹಿಡಿದು ನಡೆಸಿಕೊಂಡು ಹೋಗಿ ಮಂಚದ ಮೇಲೆ ಕುಳ್ಳಿರಿಸಿದನು. ಅಷ್ಟರಲ್ಲಿ ರುಕ್ಮಿಣಿ ತಂದ ಉಪಚಾರ ಸಾಮಾಗ್ರಿಗಳಿಂದ ಬ್ರಾಹ್ಮಣನ ಕಾಲುಗಳನ್ನು ತೊಳೆದು ಸಕಲ ಲೋಕಪಾವನನಾದ ಭಗವಂತನು ಆ ನೀರನ್ನು ತನ್ನ ತಲೆಯ ಮೇಲೆ ಪ್ರೋಕ್ಷಿಸಿ ಕೊಂಡನು. ದಿವ್ಯಗಂಧವನ್ನು ಅವನ ಮೈಗೆಲೇಪಿಸಿದನು. ಸುಗಂಧ ಧೂಪಗಳಿಂದ, ದೀಪಗಳಿಂದ ಅರ್ಚಿಸಿದನು. ತಾಂಬೂಲ, ಗೋವುಗಳನ್ನು ನಿವೇದಿಸಿ ಸ್ವಾಗತ ಹೇಳಿದನು. ಆ ಮಲಿನ ವಸ್ತ್ರಧಾರಿಯಾದ ಕುಚೇಲನ ಮೈಬಡಕಲಾಗಿತ್ತು. ಅವನ ಮೈಯಲ್ಲಿ ನರಗಳೆಲ್ಲ ಎದ್ದು ಕಾಣುತ್ತಿದ್ದವು. ಸಾಕ್ಷಾತ್ ಲಕ್ಷ್ಮೀಯಾದ ರುಕ್ಮಿಣಿಯು ಅವನಿಗೆ ಬೀಸಣಿಕೆಯಿಂದ ಗಾಳಿಬೀಸಿದಳು. ಅಂತಃಪುರಕ್ಕೆ ಅಂತಃಪುರವೇ ಶ್ರೀ ಕೃಷ್ಣನಿಂದ ಪೂಜಿತನಾದ ಆ ಅವ ಧೂತನಂತಹ ಭಿಕ್ಷುಕ ಬ್ರಾಹ್ಮಣನನ್ನು ವಿಸ್ಮಯದಿಂದ ನೋಡಿತು. ''ಈ ಬ್ರಾಹ್ಮಣ ಎಂತಹ ಪುಣ್ಯವಂತ! ತ್ರಿಲೋಕ ಗುರುವಾದ ಶ್ರೀ ನಿವಾಸನೇ ಇವನನ್ನು ಪೂಜಿಸಿದನಲ್ಲ! ಪರ್ಯಂಕದಲ್ಲಿದ್ದ ಶ್ರೀ ಲಕ್ಷ್ಮೀಯನ್ನು ಬಿಟ್ಟು ಈ ದರಿದ್ರನನ್ನು ತನ್ನಣ್ಣನೋ ಎಂಬಂತೆ ತಬ್ಬಿಕೊಳ್ಳುವುದೆಂದರೇನು?'' ಹೀಗೆ ಅಂತಃಪುರವಾಸಿಗಳು ಬೆರಗುಗೊಂಡರು.

ಆ ಇಬ್ಬರು ಗೆಳೆಯರೂ ಪರಸ್ಪರ ಕೈಹಿಡಿದುಕೊಂಡು ತಮ್ಮ ಗುರುಕುಲದ ನೆನಪುಗಳನ್ನು ಮೆಲುಕು ಹಾಕಿದರು. ಶ್ರೀ ಕೃಷ್ಣ ಪರಮಾತ್ಮನು ಅವನನ್ನು ಅತ್ಯಂತ ಅಕ್ಕರೆಯಿಂದ ಮಾತಾಡಿಸುತ್ತ ಎಂದನು, ''ಹಾರುವನೆ, ಗುರುಕುಲವಾಸ ಮುಗಿಸಿ, ಗುರುದಕ್ಷಿಣೆಯನ್ನಿತ್ತು ಸಮಾವೃತ್ತನಾದವನು ಮದುವೆಗಿದುವೆ ಮಾಡಿಕೊಂಡಿರುವೆಯಾ? ನಿನಗೆ ಮದುವೆ, ಸಂಸಾರ, ದುಡ್ಡುಗಿಡ್ಡು ಅಂದರೆ ಅಷ್ಟೇನೂ ಆಸಕ್ತಯಿಲ್ಲವೆಂಬುದನ್ನು ನಾನು ಬಲ್ಲೆ. ಲೋಕದಲ್ಲಿ ಕೆಲವರಾದರೂ ಕಾಮನೆಗಳಿಗೆ ದಾಸರಾಗದೆ ಲೋಕಸಂಗ್ರಹಕ್ಕಾಗಿ ನನ್ನಂತೆ ಕರ್ಮಗಳನ್ನು ಮಾಡುತ್ತಿರುತ್ತಾರೆ.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**
**ಪ್ರಳಯ ಪ್ರಹಸನ**
*ಲೇಖಕಿ :* ಶ್ರೀಮತಿ ಸಾವಿತ್ರಿ ಮನೋಹರ್, (ಕಳಸ), ಕಾರ್ಕಳ.
*ಪ್ರಕಾಶಕರು :*
ಸಂದೀಪ ಸಾಹಿತ್ಯ, ಆತ್ರಾಡಿ, ಉಡುಪಿ.
*ಬೆಲೆ :* 40/-

''ಮೊದಲ ನಾಟಕ 'ಪ್ರಳಯ'ದಲ್ಲಿ ಮುಂದಿನ ವರ್ಷ ಪ್ರಳಯ ಸಂಭವಿಸೀತು ಎಂಬ ಭೀತಿಯನ್ನು ಹಂಚಿಕೊಳ್ಳುವ ವೃದ್ಧ ದಂಪತಿಗಳು ಪ್ರಳಯದ ಕಾತರದಲ್ಲೂ ತಮ್ಮ ಪ್ರಣಯದ ಮಾತುಗಳನ್ನು ಹಂಚಿಕೊಳ್ಳಲು ಹಿಂದೇಟು ಹಾಕುವುದಿಲ್ಲ. ಅವರ ಪ್ರೇಮ ಕಲಹ, ಮಕ್ಕಳು ಈ ಸುದ್ದಿಯನ್ನು ಸ್ವೀಕರಿಸಿದ ಪರಿ. ಆ ಮೇಲೆ ಕೊನೆಯಲ್ಲಿ ಎಲ್ಲವೂ ಮುಗಿದೇ ಹೋಯಿತು, ಪ್ರಳಯ-ಭೂಕಂಪವಾಗಿ ಸರ್ವನಾಶ ಆಗಿಯೇ ಬಿಡ್ತು ಅಂದ್ಕೋಳ್ತಿರುವಾಗ ಆತಂಕ ದಿಂದ...'' ಎಂದು ಎಚ್.ಶಾಂತರಾಜ ಐತಾಳ್ ಈ ಕೃತಿಯ ಬಗ್ಗೆ ತಿಳಿಸುತ್ತಾರೆ.

''ಶ್ರೀಮತಿ ಸಾವಿತ್ರಿ ಮನೋಹರ್ ಅವರು ಅಧ್ಯಾಪನ ವೃತ್ತಿಯಿಂದ ನಿವೃತ್ತರಾದ ಬಳಿಕ ಸಾಮಾಜಿಕ ಚಿಂತನೆ ಮತ್ತು ಸಾಹಿತ್ಯ ಸಾಧನೆಗಳ ಬಗೆಯತ್ತ ಹೆಚ್ಚು ಹೆಚ್ಚಾಗಿ ಕಾರ್ಯಪ್ರವೃತ್ತರಾಗುತ್ತಿದ್ದಾರೆ ಎನ್ನುವುದಕ್ಕೆ ಒಂದು ಸಣ್ಣ ನಿದರ್ಶನವಾಗಿ ಈ ಕಿರುನಾಟಕ ಗುಚ್ಛ 'ಪ್ರಳಯ ಪ್ರಹಸನ' ನಮ್ಮೆದುರು ಪ್ರಸ್ತುತವಾಗಿದೆ ಎನ್ನಲಡ್ಡಿಯಿಲ್ಲ'' ಎಂದು ಸಂದೀಪ ಪ್ರಕಾಶನದ ವತಿಯಿಂದ ಇಂದಿರಾ ಹಾಲಂಬಿ (ಗಿರಿವಾಸಿನಿ) ಹೇಳುತ್ತಾರೆ.

''ನಮ್ಮ ಸುತ್ತಮುತ್ತ ನಡೆದ, ನಡೆಯುತ್ತಿರುವ, ನಡೆಯುವ ಪ್ರಸಂಗಗಳಿಗೊಂದಿಷ್ಟು ಉಪ್ಪು-ಖಾರ ಹಚ್ಚಿ ಉಣಬಡಿಸಿದ್ದೇನೆ. ಸ್ವೀಕರಿಸುವಿರೆಂಬ ತುಂಬು ವಿಶ್ವಾಸವಿದೆ'' ಎಂದು ಲೇಖಕಿ ಸಾವಿತ್ರಿ ಮನೋಹರ್ 'ಮನದಾಳ' ದಿಂದ ತಿಳಿಸುತ್ತಾರೆ.

''ಹೌದು ಕಣೇ... ನೋಡು ಈ ಪೇಪರ್ನಲ್ಲಿ ಚಿತ್ರ ಸಮೇತ ಕೊಟ್ಟಿದ್ದಾರೆ. ''ಮನುಷ್ಯ ಮನುಷ್ಯರ ಮಧ್ಯೆ ಹೊಡೆದಾಟ ನಡೆದು ಲೋಕವೆಲ್ಲ ಭೀತಿಯಿಂದ ನಡುಗುತ್ತದೆ. ಎಲ್ಲೆಂದರಲ್ಲಿ ಸುನಾಮಿಗಳೂ, ಭೂಕಂಪಗಳೂ ಸಂಭವಿಸುತ್ತವೆ. ವಿಕೃತಿನಾಮ ಸಂವತ್ಸರ ವಿನಾಶವನ್ನೇ ತರುತ್ತದೆ'' ಎಂದು ಪಾತ್ರಧಾರಿಗಳಾದ ರಂಗಜ್ಜ ಹೇಳುತ್ತಾರೆ''

ಪಾತ್ರಧಾರಿ ಸುಮತಿ ಹೇಳುತ್ತಾಳೆ ''ಅಯ್ಯೋ ಇಲ್ಲಿ ನೋಡಿ (ಪತ್ರಿಕೆ ತೋರಿಸುತ್ತಾ) 2012ರಲ್ಲಿ ಪ್ರಳಯವಾಗುತ್ತೆ ಅಂತ ಪತ್ರಿಕೆಯಲ್ಲಿ ಬಂದಿದೆ. 2012ರ ಡಿಸೆಂಬರ್ 21ರಂದು ಪ್ರಳಯ ಆಗುತ್ತದಂತೆ. ಜೀವ ಸಂಕುಲದ ಇತಿಹಾಸ ಹೇಳಹೆಸರಿಲ್ಲದಂತೆ ಕೊಚ್ಚಿಹೋಗ್ತದೆ ಅಂತ ಬರೆದಿದ್ದಾರೆ. ಅದ್ಕೇ ಏನಪ್ಪಾ ಅಂತ ಯೋಚಿಸ್ತಿದ್ದೆ''.

ಪಾತ್ರಧಾರಿ ಅಜ್ಜಿ ಹೇಳುತ್ತಾಳೆ (ನಿಧಾನವಾಗಿ ಕಣ್ಣು ಬಿಡ್ತಾ) ''ಅಯ್ಯೋ ಭೂಕಂಪ ಆಯ್ತಲ್ರೀ... ಮನೆ ಮಾಡೆಲ್ಲಾ ದಡದಡ ಬಿತ್ತಲ್ಲ. ನಿಮಗೇನೂ ಆಗ್ಲಿಲ್ವ'' (ಗಂಡನ ಮೈದಡವುವಳು)

ಆಗ ಪಾತ್ರಧಾರಿ ಸಾವಿತ್ರಮ್ಮ ಹೇಳುತ್ತಾಳೆ '' ಅಯ್ಯೋ ಅಜ್ಜೀ, ಅದು ಭೂಕಂಪ-ಪ್ರಳಯದ ಸದ್ದಲ್ಲ. ಇವತ್ತು ನಂದನ ಫಸ್ಟ್‌ನೈಟ್ ಅಲ್ವಾ ಅವರಿಗೆ ತಮಾಷೆ ಮಾಡ್ಲಿಕ್ಕೆ ಅವರ ಸ್ನೇಹಿತರು ಮಾಲೆ ಪಟಾಕಿ ಇಟ್ಟಿದ್ದರು. ಅದು ಸಿಡಿದಿದ್ದು ಮಾರಾಯ್ರೆ.''

**–ವೈ. ಮೋಹನ ರಾವ್.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್, ಮುಂಬೈ

## ಅಮ್ಮ-ಜೋಕುಳ್ನೋ ಪೊರ್ಲುದೊ ಕೂಟ

(1ನೇ ಪುಟದಿಂದ)

ಸೂಚಿಸಿದರು.

ಅಲ್ಲದೆ ಸಭಿಕರ ಪರವಾಗಿ ಸಂಘದ ಗೌರವಾಧ್ಯಕ್ಷರಾದ ಶ್ರೀಯುತ ಪಿ.ಬಿ. ವಾಸುದೇವ ರಾವ್ ಹಾಗೂ ನಿರ್ದೇಶಕರಾದ ವೈ. ಮಾಧವರಾಯರು, ಮಹಿಳಾ ವೇದಿಕೆಯ ಸದಸ್ಯೆಯರಿಂದ ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮೂಡಿ ಬರಲಿ ಎಂದು ಹಾರೈಸಿದರು. ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್‌ರವರು ಕಾರ್ಯಕ್ರಮದ ಪ್ರಸ್ತಾವನೆಯನ್ನು ಮಾಡಿದರೆ ಪಡುಬಿದ್ರಿಯ ಕುಮಾರಿ ಸ್ವಾತಿಯುವರು ನಿರೂಪಣೆ ಮಾಡಿದರು. ಬಳ್ಕುಂಜೆಯ ಶ್ರೀಮತಿ ಧರ್ಮಪ್ರಭಾ ವಿದ್ಯಾರಣ್ಯ ರಾವ್ ಇವರು ಧನ್ಯವಾದವನ್ನಿತ್ತರು. ಒಟ್ಟಿನಲ್ಲಿ ಈ ಕಾರ್ಯಕ್ರಮವು ಯಶಸ್ವಿಗೊಳ್ಳುವಲ್ಲಿ ಅವಿರತವಾಗಿ ಶ್ರಮಿಸಿದ ಕೀರ್ತಿ ಶ್ರೀಮತಿ ವೇದಾವತಿ ದಿವಾಕರ ರಾವ್ ಇವರಿಗೆ ಸಲ್ಲುತ್ತದೆ ಎಂಬುದು ಸತ್ಯವಾದ ಮಾತು.

ವರದಿ: **ಸೀತಾದೇವಿ ಭಾಸ್ಕರ್ ರಾವ್,**
**ನಿರ್ದೇಶಕರು, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ.**

## ಶ್ರೀ ಸುಬ್ರಹ್ಮಣ್ಯ ಸಭಾದ ವಾರ್ಷಿಕ ಮಹಾಸಭೆ

(1ನೇ ಪುಟದಿಂದ)

ಅವಧಿಗೆ ನೂತನ ಆಡಳಿತ ಸದಸ್ಯರನ್ನು ಸರ್ವಾನುಮತದಿಂದ ಆರಿಸಲಾಯಿತು. ಜೊತೆ ಕಾರ್ಯದರ್ಶಿ ಶ್ರೀ ಅನಿಲ್‌ರಾವ್ ಬಿ.ಎಸ್. ಸರ್ವರಿಗೂ ಧನ್ಯವಾದ ಸಮರ್ಪಿಸಿದರು. ನಂತರ ಸಭೆ ನಡೆಸಿದ ಸದಸ್ಯರು ನೂತನ ಆಡಳಿತ ಮಂಡಳಿಯನ್ನು ರಚಿಸಿದರು. ಅಧ್ಯಕ್ಷರಾಗಿ ಶ್ರೀ ಸಿ.ಎಸ್. ರಾವ್, ಉಪಾಧ್ಯಕ್ಷರುಗಳಾಗಿ ಶ್ರೀ ಎಂ.ಆರ್.ವಾಸುದೇವ ಮತ್ತು ಡಾ| ಎ.ಪಿ. ಕೃಷ್ಣ, ಕಾರ್ಯದರ್ಶಿಯಾಗಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿಗಳಾಗಿ ಶ್ರೀ ಬಿ.ಎಸ್.ಅನಿಲ್‌ರಾವ್ ಮತ್ತು ಶ್ರೀ ಚೇತನ ಶರ್ಮ, ಕೋಶಾಧಿಕಾರಿಯಾಗಿ ಶ್ರೀ ಪಿ. ಶ್ರೀಕಾಂತ ರಾವ್‌ರವರು ಆರಿಸಲಾಯಿತು. ಸದಸ್ಯರು ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದರು ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ತೀರ್ಮಾನಿಸಲಾಯಿತು.

ಬೆಳಿಗ್ಗೆ ಹಲವಾರು ಸ್ಪರ್ಧೆಗಳು ನಡೆದರೆ, ಮಧ್ಯಾಹ್ನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶ್ರೀಮತಿ ಅರುಣಾ ಸೋಮಶೇಖರ್ ಮತ್ತು ಶ್ರೀ ನಾಗರಾಜ ಶರ್ಮ ಕಾರ್ಯಕ್ರಮ ಸಂಯೋಜಿಸಿದರೆ ಶ್ರೀ ಪಿ.ಶ್ರೀಕಾಂತ ರಾವ್ ಕಾರ್ಯಕ್ರಮ ನಿರ್ವಹಿಸಿದರು.

ವರದಿ: **ಪಿ.ಶ್ರೀಕಾಂತ್ ರಾವ್**

# ನಮ್ಮ ಪ್ರವಾಸ

ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿಯ ಎಲ್ಲಾ ಸದಸ್ಯರೂ ಸೇರಿ ತಾ.7-10-2012ನೇ ರವಿವಾರ ಒಂದು ದಿನದ ಮನೋರಂಜನಾ ಕಿರು ಪ್ರವಾಸವನ್ನು ಏರ್ಪಡಿಸಿದ್ದೆವು. ನಾರಾವಿಯ ಸೂರ್ಯನಾರಾಯಣ ದೇವಸ್ಥಾನ', ಕೊಕ್ರಾಡಿಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ನಾರಾವಿಯ ಶ್ರೀಯುತ ರತ್ನಾಕರ ರಾಯರಿಂದ ನಡೆಸಲ್ಪಡುವ "ಗೋವರ್ಧನ" ಹೈನುಗಾರಿಕಾ ಕೇಂದ್ರ ಹಾಗೂ ಕೊಡ್ಯಡ್ಕದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಇವು ನಮ್ಮ ಸಂದರ್ಶನದ ತಾಣವಾಗಿದ್ದವು.

ಸುಮಾರು 75 ಸದಸ್ಯರನ್ನು ಒಳಗೊಂಡ ನಮ್ಮ ಪ್ರವಾಸಿಗರ ತಂಡ, ಪ್ರಯಾಣದ ಆನಂದವನ್ನು ಒಟ್ಟಿಗೇ ಪಡೆಯುವ ಉದ್ದೇಶದಿಂದ ಒಂದೇ ಬಸ್ಸಿನಲ್ಲಿ ಪಯಣಿಸಿದೆವು. ಸಂಘದ ಕಾರ್ಯಾಲಯದಿಂದ ಬೆಳಿಗ್ಗೆ ಸುಮಾರು 8 ಗಂಟೆಗೆ ಹೊರಟು, ಬೆಳಗ್ಗಿನ ಲಘು ಉಪಹಾರವನ್ನು ಬಸ್ಸಿನಲ್ಲಿಯೇ ಮೆಲ್ಲುತ್ತಾ ಮೊದಲು ಸೂರ್ಯನಾರಾಯಣ ದೇವಸ್ಥಾನವನ್ನು ತಲುಪಿದೆವು. ಅಲ್ಲಿ ದೇವರ ದರ್ಶನದ ನಂತರ ದೇವಳದ ಮೊಕ್ತೇಸರ ನಮ್ಮವರೇ ಆದ ಶ್ರೀಯುತ ವಸಂತ ರಾಯರ ಆತಿಥ್ಯವನ್ನು ಸ್ವೀಕರಿಸಿ, ಬೆಳಗಿನ ಉಪಾಹಾರವನ್ನು ಮುಗಿಸಿ, ದೇವಳದ ಬದಿಯಲ್ಲಿಯೇ ಹರಿಯುವ ನದಿನೀರಿನಲ್ಲಿ ಹಿತವೆನಿಸುವಷ್ಟು ಚೆಲ್ಲಾಟವಾಡಿ, ಮುಂದೆ ಕೊಕ್ರಾಡಿಗೆ ಪಯಣಿಸಿದೆವು.

ನಮ್ಮ ಸಮಾಜದ ಆಡಳಿತಕ್ಕೊಳಪಟ್ಟ ದೇವಸ್ಥಾನಗಳ ಜೀರ್ಣೋದ್ಧಾರದ ರೂವಾರಿ ಶ್ರೀಯುತ ಕರುಣಾಕರ ಬೆಳ್ಳೆ ಹಾಗೂ ಕೊಕ್ರಾಡಿ ರಾಮರಾಯರ ಸಾರಥ್ಯದಲ್ಲಿ ನಮಗೆ ನಮ್ಮ ಎಣಿಕೆಗೂ ಮೀರಿದ ಆತಿಥ್ಯ ಅಲ್ಲಿ ದೊರೆತಿರುವುದು ನಮ್ಮ ಭಾಗ್ಯವೇ ಸರಿ, ಅಲ್ಲದೆ ಶ್ರೀ ಸುಬ್ರಹ್ಮಣ್ಯ ದೇವರ ಮಧ್ಯಾಹ್ನದ ಮಹಾಪೂಜೆಯಲ್ಲಿ ಪಾಲ್ಗೊಳ್ಳುವ ಭಾಗ್ಯ ಕೂಡಾ ನಮಗೆ ದೊರೆಕಿತು. ಅಲ್ಲಿ ಶ್ರೀಯುತ ಕೊಕ್ರಾಡಿ ವಸಂತರಾಯರು ನಮ್ಮನ್ನು ಸ್ವಾಗತಿಸಿ ಅಲ್ಲಿಯ ಸ್ಥಳದ ಮಹಿಮೆ ಹಾಗೂ ಪುರಾಣವನ್ನು ತಿಳಿಸಿದರು. ಮಧ್ಯಾಹ್ನ ರಸವತ್ತಾದ ಭೋಜನವಲ್ಲದೆ 3 ಗಂಟೆಗೆ ಲಘು ಉಪಾಹಾರವನ್ನು ಸೇವಿಸಿ ನಾರಾವಿಯ "ಗೋವರ್ಧನ" ಹೈನುಗಾರಿಕಾ ಕೇಂದ್ರಕ್ಕೆ ಆಗಮಿಸಿದೆವು.

ಶ್ರೀಯುತ ರತ್ನಾಕರ ರಾಯರು ತಮ್ಮ ಹೈನುಗಾರಿಕೆಯ ಉದ್ದೇಶ, ಅದರ ಕಾರ್ಯಗಳು ಮತ್ತು ಅದರಿಂದಾಗುವ ಪ್ರಯೋಜನಗಳ ಬಗ್ಗೆ ತಿಳಿಸಿದರು. ನಮ್ಮ ಜತೆಗಿದ್ದ ಮಕ್ಕಳಿಗೆ ಇದು ಒಂದು ಶೈಕ್ಷಣಿಕ ಪ್ರವಾಸದಂತೆಯೂ ಆಯಿತು. ಅಲ್ಲದೆ ಅವರು ತಮ್ಮ ಮನೆಯಲ್ಲಿ ಒಂದು ಸೌಹಾರ್ದ ಕೂಟವನ್ನು ಏರ್ಪಡಿಸಿ, ನಮ್ಮ ಸಂಘದ ಪದಾಧಿಕಾರಿಗಳನ್ನು ಪುಷ್ಪವಿತ್ತು ಗೌರವಿಸಿದರು. ನಾವೂ ಸಂಘದ ವತಿಯಿಂದ ಅವರಿಗೆ ಸ್ನೇಹದ ಸ್ಮರಣಿಕೆಯನ್ನು ನೀಡಿದೆವು. ಅಲ್ಲಿ ಆತಿಥ್ಯವನ್ನು ಸ್ವೀಕರಿಸಿ, ಮುಂದೆ ಕೊಡ್ಯಡ್ಕಕ್ಕೆ ಪಯಣಿಸಿ ಅಲ್ಲಿ ಶ್ರೀ ಅನ್ನಪೂರ್ಣೇಶ್ವರಿಯ ದರ್ಶನ ಪಡೆದು ನಮ್ಮ ನಮ್ಮ ಮನೆಗಳಿಗೆ ತೆರಳಿದೆವು.

ಪಯಣದುದ್ದಕ್ಕೂ ಮಕ್ಕಳು ದೊಡ್ಡವರೆನ್ನದೆ ಹಾಡುತ್ತಾ ನಲಿಯುತ್ತಾ ತಮ್ಮ ವಯಸ್ಸನ್ನು ಮರೆತು, ಒಬ್ಬರೊಡನೊಬ್ಬರು ಬೆರೆತು ಊರು ಸಮೀಪಿಸಿದಾಗ ಯಾಕಾದರೂ ಹಿಂದಿರುಗಿದೆವೋ ಎಂಬ ಆತಂಕವೇ ಎಲ್ಲರ ಮನದಲ್ಲೂ. ಮರುದಿನದ ಯಥವತ್ತಾದ ದಿನಚರಿಗೆ ತಯಾರಾಗುವ ಚಿಂತೆ ಎಲ್ಲರ ಮುಖದಲ್ಲೂ ಕಾಣುವಾಗ ಇಂತಹ ಪ್ರವಾಸಗಳು ಆಗಾಗ ನಡೆಯಬೇಕೆನ್ನುವ ಬಯಕೆ ಎಲ್ಲರಲ್ಲಿ ಮೂಡಿದರೆ ಅಚ್ಚರಿಯಿಲ್ಲ.

ವರದಿ: **ಸೀತಾದೇವಿ ಭಾಸ್ಕರ್ ರಾವ್,**
**ನಿರ್ದೇಶಕರು, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ.**

# ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ ಬೆಳ್ಳೆ ಶ್ರೀನಿವಾಸರಾವ್



ಮಲಾಡ್ ಮುಂಬೈಯಲ್ಲಿ ವಾಸವಿರುವ ಬೆಳ್ಳೆ ಶ್ರೀನಿವಾಸ ರಾಯರು ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕರಿಸಿದ್ದಾರೆ.

ಇವರು ಉಡುಪಿಯ ಸಮೀಪದ ಬೆಳ್ಳೆಯವರಾಗಿದ್ದು ಬೆಳ್ಳೆಯ ರಾಮರಾವ್ ಮತ್ತು ಸುಂದರಿ ಅಮ್ಮನವರ ಪುತ್ರರಾಗಿದ್ದಾರೆ. ಪಿ.ಯು.ಸಿ ಮುಗಿಸಿದ ಬಳಿಕ ಉನ್ನತ ವ್ಯಾಸಂಗಕ್ಕಾಗಿ ಮಹಾ ರಾಷ್ಟ್ರಕ್ಕೆ ಹೋದರು. ಇವರಿಗೆ ಸಿನಿಮಾಗಳ ಬಗ್ಗೆ ಆಸಕ್ತಿ ಇದ್ದು ಚಲನಚಿತ್ರಗಳನ್ನು ತಯಾರಿಸುವ ಕಲೆಯಲ್ಲಿ ವಿಶೇಷ ಅಭಿರುಚಿ ಇದ್ದುದರಿಂದ ಚಲನಚಿತ್ರರಂಗಕ್ಕೆ ಆಕರ್ಷಿಸಲ್ಪಟ್ಟರು.

ಇವರು ನಾಸಿಕದಲ್ಲಿ ಕೆಲಸ ಮಾಡುತ್ತಿರುವಾಗ ಸಿನಿಮಾ ನಿರ್ಮಾಪಕ ದುಲಾಲ್ ಗುಹ ಇವರ ಪರಿಚಯವಾಗಿ, ಮುಂಬೈಗೆ ಹೋಗಿ ದುಲಾಲ್ ಗುಹಾ ಇವರ ಚಿತ್ರಗಳಾದ 'ದೊ ಅನ್‌ಜಾನೆ', 'ದಿಲ್ ಕಾ ಹೀರಾ', 'ಧನ್ ದೌಲತ್', 'ದೊ ದಿಶಾಯೆ', 'ಖಾನ್ ದೋಸ್ತ್', 'ದುವಾನ್', 'ಸಾಗರ್ ಸಂಗಮ್' ಹಾಗೂ 'Ilaaka' ಚಿತ್ರಗಳಲ್ಲಿ ಪ್ರೊಡಕ್ಷನ್ ಮೆನೇಜರ್ ಆಗಿ ಕೆಲಸ ಮಾಡಿದರು.

ಅಲ್ಲದೆ 'ಬಾಪ್ ನಂಬರಿ ಬೇಟಾ ದಸ್ ನಂಬರಿ', 'ದಿಲ್ ಹಿ ತೋ ಹೈ', 'ಸನಮ್' ಮತ್ತು ಅಶುತೋಷ್ ಗೊವಾರಿಕೆರ ಇವರ 'ಸ್ವದೇಶ್' ಚಿತ್ರಗಳಲ್ಲಿ ಅತ್ಯುತ್ತಮ ಎಕ್ಸಿಕ್ಯುಟಿವ್ ಪ್ರೊಡ್ಯುಸರ್ ಆಗಿ ಕೆಲಸಮಾಡಿ ಮುಂಬೈಯ ಸಿನಿಮಾ ಉದ್ದಿಮೆಯಲ್ಲಿ ಹೆಸರು ಗಳಿಸಿದರು.

ಇಂಡಿಯನ್ ಸೂಪರ್ ಸ್ಟಾರ್ ಅಮೀರ್ ಖಾನ್ ಇವರು ಅಮೀರ್ ಖಾನ್ ಪ್ರೊಡಕ್ಷನ್ ಲಾಂಛನದಡಿಯಲ್ಲಿ 'ಲಗಾನ್' ಸಿನಿಮಾವನ್ನು ಮಾಡಲು ಶುರು ಮಾಡಿದಾಗ ಎಕ್ಸಿಕ್ಯುಟಿವ್ ಪ್ರೊಡ್ಯುಸರ್ ಆಗಿ ಶ್ರೀಯುತ ಶ್ರೀನಿವಾಸ ರಾವ್ ಅವರನ್ನು ಆಯ್ಕೆ ಮಾಡಿದರು. ಈ ಚಲನಚಿತ್ರವು 2001ರ Oscar Awardಗೆ ನಾಮಕರಣ ಗೊಂಡಿತ್ತು.

ಆ ಬಳಿಕ ಅವರು ಅಮೀರ್ ಖಾನ್ ಪ್ರೊಡಕ್ಷನ್‌ನ ಪ್ರಶಸ್ತಿ ವಿಜೇತ ಸಿನಿಮಾ 'ತಾರೆ ಜಮಿನ್ ಪರ್', 'ಜಾನೆ ತು ಯಾ ಜಾನೆ ನಾ', 'ಪೀಪ್ಲಿ ಲಿವ್' (Peepli Live), 'ಡೆಲ್ಲಿ ಬೆಲ್ಲಿ' ಹಾಗೂ 'ದೋಬಿ ಘಾಟ್' ಈ ಚಿತ್ರಗಳ ಉತ್ಪಾದನೆಯಲ್ಲಿ ತುಂಬಾ ಶ್ರಮವಹಿಸಿದ್ದಾರೆ. ಅವರ ಇತ್ತೀಚೆಗಿನ ಟೆಲಿವಿಶನ್ ಶೋ 'ಸತ್ಯಮೇವ ಜಯತೆ' ಯಲ್ಲಿಯೂ ಶ್ರೀನಿವಾಸ ರಾಯರ ಕೊಡುಗೆ ಇದೆ.

ಬೆಳ್ಳೆ ಶ್ರೀನಿವಾಸ ರಾವ್ ಇವರು ಶ್ರೀಮತಿ ಶಾಮಲಾ ರಾವ್ ಅವರನ್ನು ವಿವಾಹವಾಗಿದ್ದು, ಮಗಳು ಶರಣ್ಯ, ಮುಂಬೈಯಲ್ಲಿ 3ನೇ ವರ್ಷದ ಬಿ ಫಾರ್ಮಾ ಓದುತ್ತಿದ್ದಾಳೆ. ಇವರ ಸಾಧನೆಗೆ ಶ್ರೀ ಶಾರದಾ ಬಳಗದ ಹೃತ್ಪೂರ್ವಕ ಅಭಿನಂದನೆಗಳು, ಹಾಗೂ ಸಿನಿಮಾರಂಗದಲ್ಲಿ ಇವರು ಇನ್ನೂ ಹೆಚ್ಚಿನ ಸಾಧನೆಗಳನ್ನು ಮಾಡಲಿ ಎಂದು ನಮ್ಮೆಲ್ಲರ ಹಾರೈಕೆ.

ಇವರ ಚರ ದೂರವಾಣಿ ಸಂಖ್ಯೆ - 09821211688

ಕೃಪೆ : **ಇ-ಮೇಲ್**
ಅನುವಾದ : **ಎಚ್.ಎನ್.ಶ್ಯಾನುಭಾಗ್**

# ಮಂಗಳೂರು:- ದಿವಂಗತ ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ಸಾಧಕರಿಗೆ ಸನ್ಮಾನ



ದಿನಾಂಕ. 28-10-2012ರಂದು ಶ್ರೀ ಸುಬ್ರಮಣ್ಯ ಸಭಾ ಬಿಜೈ ರಸ್ತೆ ಮಂಗಳೂರು-3 ಇಲ್ಲಿ ದಸರಾ ಪ್ರಯುಕ್ತ ನಡೆದ ನಾಡಹಬ್ಬದಂದು ಸ್ಥಾನಿಕ ಬ್ರಾಹ್ಮಣ ಸಮಾಜದ, 2011-12ರ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ 34 ಸಾಧಕರನ್ನು ಹಾಗೂ ಲಲಿತ ಕಲೆಯಲ್ಲಿ ಪ್ರಾವಿಣ್ಯತೆಯನ್ನು ಹೊಂದಿದ ಓರ್ವ ಸಾಧಕಿಯನ್ನು "ದಿವಂಗತ ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರೀ ಪ್ರತಿಷ್ಠಾನ"ದ ವತಿಯಿಂದ ಪ್ರತಿಷ್ಠಾನದ ಸ್ಥಾಪಕರಾದ ಕೆ.ಸದಾಶಿವ ಶಾಸ್ತ್ರಿ ಮತ್ತು ಸೌಭದ್ರಾ ಶಾಸ್ತ್ರಿ ಇವರು ಫಲ, ಪುಷ್ಪ , ಸ್ಮರಣಿಕೆ, ಗೌರವಧನ ನೀಡಿ ಸಮ್ಮಾನಿಸಿದರು.

ವರದಿ :**ಕೆ.ಸದಾಶಿವ ಶಾಸ್ತ್ರಿ ಕುಳಾಯಿ, ಮಂಗಳೂರು**

# ವೇದಗಣಿತದ ಪರಿಚಯ : ಪ್ರಶ್ನೆಗಳಿಗೆ ಉತ್ತರ

-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್., ಕಾರ್ಪೋರೇಶನ್ ಬ್ಯಾಂಕ್



(ಹಿಂದಿನ ಸಂಚಿಕೆಯಿಂದ...)

**ಅಗಸ್ಟ ತಿಂಗಳ ಪ್ರಶ್ನೆಗೆ ಉತ್ತರ:**

(ಪ್ರಶ್ನೆ-888888881ನ್ನು ಎಷ್ಟರಿಂದ ಭಾಗಿಸಿದರೆ 0 ಶೇಷ ಬರುತ್ತದೆ?) ಈ ಸಂಖ್ಯೆಗಳನ್ನು ಕೂಡಿಸಿದರೆ 65 ಬರುತ್ತದೆ. 65ನ್ನು 13ರಿಂದ ಅಥವಾ 5 ರಿಂದ ಭಾಗಿಸಲು ಸಾಧ್ಯ. ಪ್ರಶ್ನೆಯ ಕೊನೆಗೆ 1 ಇರುವುದರಿಂದ ಅದನ್ನು 1,9,7,3 ಅಂಕೆ ಇರುವ ಸಂಖ್ಯೆಯಿಂದ ಮಾತ್ರ ಭಾಗಿಸಲು ಸಾಧ್ಯ. ಭಾಗಿಸುವ ಸಂಖ್ಯೆಯ ಮೊತ್ತವು 13 ಬರಬೇಕು. ಆದುದರಿಂದ ಉತ್ತರ : 10903

**ಸೆಪ್ಟೆಂಬರ್ ತಿಂಗಳ ಪ್ರಶ್ನೆಗೆ ಉತ್ತರ**-ಬ್ಲಾಕ್ 8 ಮತ್ತು ಬ್ಲಾಕ್ 9

```
1. [8][8][8] +          2. [9][9][9] +
      [8][8]                        1
   ---------              ---------
    9  7  6 +              1  0  0  0
         [8]              =========
         [8]
         [8]               [9][9][9] ÷ [9][9][9]
   ---------                   = 1
   1  0  0  0
   =========
```

**ಅಕ್ಟೋಬರ್ ತಿಂಗಳ ಪ್ರಶ್ನೆಗೆ ಉತ್ತರ**

ಉತ್ತರ = 1,3,9,27=40ಕೆ.ಜಿ

ಈ ನಾಲ್ಕು ಕಲ್ಲುಗಳನ್ನು ಉಪಯೋಗಿಸಿ 1 ರಿಂದ 40 ಕೆ.ಜಿವರೆಗೆ ತೂಕವನ್ನು ಮಾಡಬಹುದು.

**ನವೆಂಬರ್ ತಿಂಗಳ ಪ್ರಶ್ನೆಗೆ ಉತ್ತರ**

| | (ಸಮಯ ನಿಮಿಷಗಳಲ್ಲಿ) |
|---|---|
| ಇಬ್ಬರಿಗೆ, 1 ನಿಮಿಷದಲ್ಲಿ ಮತ್ತು 2 ನಿಮಿಷದಲ್ಲಿ ಹೋಗಲು ತಗಲುವ ಸಮಯ | 2 ನಿಮಿಷ |
| ದಾಟಲು 1 ನಿಮಿಷ ತೆಗೆದುಕೊಳ್ಳುವವನಿಗೆ ವಾಪಸ ಬರಲು ತಗಲುವ ಸಮಯ | 1 ನಿಮಿಷ |
| ಎರಡನೇ ಬಾರಿ ಹೋಗಲು 10 ನಿಮಿಷ ಮತ್ತು 5 ನಿಮಿಷ ತೆಗೆದುಕೊಳ್ಳುವವರಿಗೆ ತಗಲುವ ಸಮಯ | 10 ನಿಮಿಷ |
| ವಾಪಸ್ ಬರುವಾಗ 2 ನಿಮಿಷ ತೆಗೆದುಕೊಳ್ಳುವವನಿಗೆ ತಗಲುವ ಸಮಯ | 2 ನಿಮಿಷ |
| ಕೊನೆಯದಾಗಿ 2 ನಿಮಿಷ ಮತ್ತು 1 ನಿಮಿಷ ತೆಗೆದುಕೊಳ್ಳುವವರಿಗೆ ಹೋಗಲು ತಗಲುವ ಸಮಯ | 2 ನಿಮಿಷ |
| ಉತ್ತರ-ತಗಲುವ ಒಟ್ಟು ಸಮಯ | 17 ನಿಮಿಷ |

# ಸೇವಾ ಧುರೀಣ ಎಂ.ಆರ್.ವಾಸುದೇವ

ಬದಲಾಗುತ್ತಿರುವ ಸದ್ಯದ ಸಾಮಾಜಿಕ ಸ್ಥಿತಿಗತಿಗಳನ್ನು ಅವಲೋಕಿಸುವಾಗ ಸರಕಾರಿ ಸೇವೆಯನ್ನು ದೇವರ ಸೇವೆಯೆಂದು ತ್ರಿಕರಣ ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಳ್ಳುವವರು ತೀರಾ ವಿರಳ ಎನ್ನಬಹುದು. ಕೆಲವರು ಕನಸುಗಳನ್ನು ಕಾಣುವುದರಲ್ಲೇ ಸೇವಾವಧಿಯನ್ನು ಪೂರ್ತಿಗೊಳಿಸುವಾಗ ಸ್ವಜನ ಪಕ್ಷಪಾತ, ಸ್ವಾರ್ಥಾಭಿಲಾಷೆಗಳಿಂದಲೇ ಸಂತೃಪ್ತಿಗೊಳ್ಳುವವರಿದ್ದಾರೆ. ಸರ್ವ ಸಾಮಾನ್ಯವಾಗಿ ಹೀಗಿರುವುದಾದರೂ ಕೆಲವು ಮಂದಿ ಮಾತ್ರ, ಅದಕ್ಕೆ ತೀರಾವಿರುದ್ಧವಾಗಿ, ಕೆಲಸವೇ ಪೂಜೆ, ದಕ್ಷತೆಯೇ ಧರ್ಮ ಎಂದು ತಿಳಿದು ನಿತ್ಯ ಹೊಸ ಕನಸುಗಳನ್ನು ಕಾಣುತ್ತಿರುವುದು ಮಾತ್ರವಲ್ಲದೆ ಅದನ್ನು ನನಸಾಗಿ ಪರಿವರ್ತಿಸಿ ಸಮಾಜ ಸೇವಕರಾಗಿ ಸರ್ವರ ಪ್ರಶಂಸೆಗೆ ಪಾತ್ರರಾಗುತ್ತಾರೆ. ತಮ್ಮ ಉದ್ಯೋಗವನ್ನು ಅತ್ಯಂತ ಶ್ರದ್ಧಾ ಪೂರ್ವಕವಾಗಿ, ಪ್ರಾಮಾಣಿಕತೆಯಿಂದ ಸಮಾಜದ ಅಭ್ಯುದಯವನ್ನೇ ಮುಂದಿರಿಸಿಕೊಂಡು ಜನಸೇವಕರಾಗಿ ಬಾಳುವವರು ಬಹುಮಂದಿ ಇರುವುದರಿಂದಲೇ ಭಾರತೀಯ ಸಂಸ್ಕೃತಿಯು ಜೀವಂತವಾಗಿದೆಯೆಂಬುದನ್ನು ತಿಳಿಯಬಹುದು. ಕೆಲವು ಮಂದಿ ಕೇವಲ ವ್ಯಕ್ತಿಗಳಾಗಿರದೆ ಸಮಾಜ ಸೇವೆಯಲ್ಲಿ ತಮ್ಮ ಕರ್ತವ್ಯಗಳಲ್ಲಿ ಶಕ್ತಿಯಾಗಿ ವಿಜೃಂಭಿಸುತ್ತಾರೆ. ಅಂತಹವರು ಎತ್ತರಕ್ಕೇರುತ್ತಲೇ ಸರಳ ಸಜ್ಜನಿಕೆಯಿಂದ ತಗ್ಗಿದ ಗದ್ದೆಗೆ, ಮೂರು ಬೆಳೆಯೆಂಬಂತೆ ಜನಮನ್ನಣೆಯನ್ನು ಗಳಿಸುತ್ತಾರೆ. ಅಂತಹ ಅಪೂರ್ವ ವ್ಯಕ್ತಿಗಳಲ್ಲಿ ಮಂಗಳೂರು ಬಜಪೆ ವಿಮಾನ ನಿಲ್ದಾಣದಲ್ಲಿ ನಿರ್ದೇಶಕರಾಗಿದ್ದು ನಿವೃತ್ತಿಯಾಗಿರುವ ಮಾರ್ಪಳ್ಳಿ ರಾಮಯ್ಯ ವಾಸುದೇವರು ಒಬ್ಬರು.

ಸುಮಾರು ನಾಲ್ಕು ದಶಕಗಳ ಕಾಲ ಸರಕಾರಿ ಸೇವೆಯಲ್ಲಿದ್ದ ಅವರು ಬಹುಪಾಲು ಸಮಯವನ್ನು ಮಂಗಳೂರಿನಲ್ಲಿಯೇ ಸಂತೃಪ್ತಿಯಿಂದ, ಸರ್ವ ಜನಮಾನ್ಯರಾದಂತೆ, ರೋಗಗ್ರಸ್ತವಾಗಿದ್ದ ಬಜಪೆ ವಿಮಾನ ನಿಲ್ದಾಣಕ್ಕೆ ಹೊಸ ರೂಪವನ್ನು ನೀಡುವಲ್ಲಿ ದಿವಾನಿಶಿ ದುಡಿದವರು. ಆರಂಭದಲ್ಲಿ ಅದನ್ನು ಕಂಡವರಿಗೆ ಕಳೆದೆರಡು ದಶಕಗಳಲ್ಲಿ ವಾಸುದೇವ ಅವರ ಆಡಳಿತಾವಧಿಯಲ್ಲಿ ಆದ ಬದಲಾವಣೆಗಳು, ಅತ್ಯದ್ಭುತ ಎಂದರೆ ಅದು ಉತ್ಪ್ರೇಕ್ಷೆಯ ಮಾತಾಗಲಾರದು. ಈಗಿನ ನೂತನ ನಿಲ್ದಾಣದ ವಿನ್ಯಾಸವನ್ನು ಕಂಡಾಗ, ಇದೊಂದು ಅಲ್ಲಾವುದ್ದೀನನ ವಿಚಿತ್ರ ದೀಪದಂತಾಗಿದೆ ಎಂಬ ಉದ್ಗಾರ ಸಹಜವೇ ಸರಿ.



ಶ್ರೀಮತಿ ಸರಸ್ವತಿ ರಾಮಯ್ಯನವರ ಪುತ್ರರಾಗಿ ನರಸಿಂಹ ರಾಜಪುರದಲ್ಲಿ ಜಗದ ಬೆಳಕನ್ನು ಕಂಡು ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಪಡೆದರೂ ಮಾತೃ ಮನೆ ಉಡುಪಿಯ ಮಾರ್ಪಳ್ಳಿಯಾದುದರಿಂದ ಹುಟ್ಟೂರಿನ ಪ್ರೇಮ ಸದಾ ಹಸಿರಾಗಿಯೇ ಚೈತನ್ಯ ನೀಡಿದುದು ದಕ್ಷಿಣ ಕನ್ನಡಿಗರ ಸೌಭಾಗ್ಯವೇ ಸರಿ. 1988ರಲ್ಲಿ ಸಾಮಾನ್ಯ ಉದ್ಯೋಗಿಯಾಗಿ ಸೇರಿದಂದಿನಿಂದಲೇ ದಕ್ಷತೆಯಿಂದ ದುಡಿದು ನಿಲ್ದಾಣದ ವಿವಿಧ ಸೌಲಭ್ಯಗಳನ್ನು ಸುಲಲಿತವಾಗಿ ನೆರವೇರಿಸುವಲ್ಲಿ ಸರಕಾರದ ಸಹಕಾರದೊಂದಿಗೆ ಸಾರ್ವಜನಿಕರ ಬೆಂಬಲವನ್ನು ಪಡೆಯುವಲ್ಲಿ ಸಫಲರಾದರು. ನೂತನ ಟರ್ಮಿನಲ್ ನಿರ್ಮಾಣದೊಂದಿಗೆ ಎರಡನೇ ಓಟದ ದಾರಿ, ಹೊಸ ಕಟ್ಟಡ, ಸಂಪರ್ಕ ರಸ್ತೆ, ಐಎಲ್‌ಎಸ್ ಮತ್ತು ಎಟಿಸಿ ಟವರ್, ಕಸ್ಟಮ್ಸ್ ವಿಭಾಗದೊಂದಿಗೆ ವಿವಿಧ ವಿಭಾಗಗಳ ಉನ್ನತೀಕರಣವಾದಂತೆ ಅಂತಾರಾಷ್ಟ್ರೀಯ ನಿಲ್ದಾಣವಾಗಿ ಪರಿವರ್ತಿತವಾಗುವಲ್ಲಿ ವಾಸುದೇವರ ಪರಿಶ್ರಮ ಉಲ್ಲೇಖನೀಯ. ಗುಣಮಟ್ಟದ ನಿರ್ವಹಣೆಗಾಗಿ ಪ್ರಮಾಣಪತ್ರ ವನ್ನೂ ಪಡೆದ ಹಿರಿಮೆ ಅವರದು. ನಷ್ಟದಲ್ಲಿದ್ದ ನಿಲ್ದಾಣದ ವ್ಯವಹಾರ ಗಮನೀಯವಾಗಿ ಸುಧಾರಣೆಗೊಳ್ಳುತ್ತಾ ಸುಮಾರು ಹನ್ನೆರಡುವರೆ ಕೋಟಿಗಳನ್ನು ಮೀರುವ ಸಾಧನೆಯಾಗಿದೆ ಯೆಂದರೆ ಆಶ್ಚರ್ಯವಾಗದಿರದು.

ಕಾರ್ಮಿಕ ಸಚಿವಾಲಯದಿಂದ ಮೊದಲ್ಗೊಂಡು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಅಧಿಕಾರಿಯಾಗಿ, ಮುಂದೆ ವಿಮಾನ ನಿಲ್ದಾಣ ಕ್ಷೇತ್ರದಲ್ಲಿ ಚೆನ್ನೈ, ಅಹಮದಾಬಾದ್, ಅಲಹಾಬಾದ್, ಕಲ್ಲಿಕೋಟೆ, ಕೊಯಮತ್ತೂರುಗಳಲ್ಲಿ ತನ್ನ ಉದ್ಯೋಗ ಮಾಡಿದ್ದರೂ, ಬಹುಭಾಗವನ್ನು ಕಳೆದುದು ಮಂಗಳೂರಲ್ಲಿಯೆ. ಸೇವೆಯಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರೂ ತನ್ನ ಸಹೋದ್ಯೋಗಿಗಳನ್ನು ಪ್ರೀತಿಯಿಂದ ಕಂಡವರು. ಕಷ್ಟ ಸುಖಗಳಲ್ಲಿ ಭಾಗಿಯಾದವರು. ತಾನು, ಬಾಲ್ಯದಲ್ಲಿದ್ದಾಗ ಅನುಭವಿಸಿದ ಕಷ್ಟಗಳನ್ನು ಎಂದೂ ಮರೆಯದೆ, ಇತರರನ್ನು ಸಂತಸದಲ್ಲಿ ಬದುಕಿಸಿ ತಾನು ಬದುಕಬೇಕೆಂಬ ಧೋರಣೆಯನ್ನು ಜೀವನದುದ್ದಕ್ಕೂ ಪಾಲಿಸುತ್ತಾ ಬಂದವರು. ಹೃದಯ ಶ್ರೀಮಂತಿಕೆಯೊಂದಿಗೆ ಸದಾ ನಗುಮುಖದಿಂದಲೇ ದಕ್ಷ ಆಡಳಿತಗಾರನೆನಿಸಿಕೊಂಡ 'ಎಂ.ಆರ್' ಮಂಗಳೂರು ವಿಮಾನ ನಿಲ್ದಾಣ ಪ್ರಗತಿಯ ಮಹತ್ತ್ವದ ರೂವಾರಿಯೆನಿಸಿಕೊಂಡುದು ಮಾತ್ರವಲ್ಲದೆ ಇತರ ಸಾಮಾಜಿಕ ಕೆಲಸ ಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡ ರೀತಿ ಗುರುತರವಾದುದು, ಗೌರವಯುತವಾದುದು. ಸಮಾಜದ ಹಿತಚಿಂತನೆಯೇ ಸೇವೆಯ ಜೀವಾಳವೆಂದರಿತು ಅದನ್ನು ಅನುಷ್ಠಾನದಲ್ಲಿ ತಂದವರು.

ಕವಿ, ಸಾಹಿತಿ ಸಂಘಟಕರಾಗಿ, ಕಲಾವಿದನಾಗಿ, ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಜ್ಯೋತಿಷ್ಯದಲ್ಲಿಯೂ ಕೈಯಾಡಿಸಿದವರು. ಉತ್ತಮ ವಾಗ್ಮಿಯಾಗಿ ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಅನೇಕ ಸಮಾಜ ಸೇವಾ ಚಟುವಟಿಕೆಗಳಲ್ಲಿ ಗುರುತಿಸಿಕೊಂಡವರು. ಮಂಗಳೂರಿನ ಸುತ್ತಮುತ್ತ ಶಿಸ್ತಿನ ಸಂಘ ಸಂಸ್ಥೆಗಳಲ್ಲಿ ಶ್ರೀಮಾನ್ ವಾಸುದೇವ ಅವರ ಹೆಸರು ಅಗ್ರಪಂಕ್ತಿಯಲ್ಲಿಯೇ ಕಾಣಿಸಿಕೊಳ್ಳುತ್ತಿರುವುದು ಅವರ ಕ್ರಿಯಾಶೀಲ ಸೇವೆ ಸಹೃದಯ ಸಂಪನ್ನತೆಗೆ ಸಾಕ್ಷಿ.

ದಶಕಗಳ ಹಿಂದೆ ಬೊಂಬಾಯಿ, ಬೆಂಗಳೂರು ಸಂಚಾರಕ್ಕೆ ಮಾತ್ರ ಸೀಮಿತವಾಗಿದ್ದ ಬಜಪೆ ನಿಲ್ದಾಣ ಇಂದು ಅಂತಾರಾಷ್ಟ್ರೀಯ ನಿಲ್ದಾಣವಾಗಿ ಪ್ರಪಂಚದ ಅನೇಕ ದೇಶಗಳು ತೀರಾ ಹತ್ತಿರವಾಗಿವೆ. ನೆರೆಮನೆಯ ಸಂಪರ್ಕದಂತೆ ಲೋಹದ ಹಕ್ಕಿಗಳ ಹಾರಾಟದಲ್ಲಿ ಗಣ್ಯಸ್ಥಾನದಲ್ಲಿ ಗುರುತಿಸಿಕೊಂಡಿರುವುದರಲ್ಲಿ ಎಂ.ಆರ್. ವಾಸುದೇವರ ಅವಿರತ ಶ್ರಮ ಊಹನಾತೀತ. ಅನಿರೀಕ್ಷಿತ ಅಪಘಾತವೊಂದು ಬರಸಿಡಿಲಿನಂತೆ ಬಂದೆರಗಿದಾಗ ಸಹಿಸಲಾಗದ ಮಾನಸಿಕ ನೋವಿನ ಮಧ್ಯೆಯೂ ಮರೆಯಲಾಗದ ಮಾನವೀಯ ಮೌಲ್ಯಗಳನ್ನು ಎಂದೂ ಮರೆಯಲಾಗದು. ಎಲ್ಲಾ ನಿಟ್ಟಿನಲ್ಲಿಯೂ ಒಬ್ಬ ಅಧಿಕಾರಿಯಾಗಿ ಮಾಡಬೇಕಾದ ನೆರವಿನಲ್ಲಿಯೂ ಸಾರ್ವಜನಿಕರ ಪ್ರೀತ್ಯಾದರಗಳಿಗೆ ಪಾತ್ರರಾದರು. ಅವರನ್ನು ಹತ್ತಿರದಿಂದ ಬಲ್ಲವರಿಗೆ ಮಾತ್ರ ಗೊತ್ತು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಗತಿಯ ಯೋಜನೆಗಳ ಚಿಂತಕರಲ್ಲಿ ಹತ್ತಾರು ಮಂದಿ ಶ್ರಮಿಸಿದವರಲ್ಲಿ ಎಂ.ಆರ್.ವಾಸುದೇವ ಅವರು ಕೂಡಾ ಒಬ್ಬರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅವರ ನೆನಪು ಜಿಲ್ಲೆಯ ಜನರ, ಮನಮಂದಿರದಲ್ಲಿ ಚಿರಸ್ಥಾಯಿಯಾಗಿರಬಲ್ಲುದು. 2012, ಅಕ್ಟೋಬರ್ 31ರಂದು ವೃತ್ತಿಯಿಂದ ನಿವೃತ್ತರಾದರೂ ಜನಸೇವಾ ಪ್ರವೃತ್ತಿಯು ನಿತ್ಯ ನೂತನವಾಗಿ ಪ್ರವಹಿಸುತ್ತಿರುವಂತೆ ಸದಾ ಶಾಂತಿ ನೆಮ್ಮದಿಯ ಬದುಕು ಬಂಧುರವಾಗಿರಲಿ.

ಇವರು ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೂ ಬಹಳಷ್ಟು ಕೊಡುಗೆಗಳನ್ನು ಕೊಟ್ಟಿರುತ್ತಾರೆ. ನಮ್ಮ ಸಮಾಜದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಶತಮಾನೋತ್ಸವ ಸಮಿತಿಯ ಗೌರವಾಧ್ಯಕ್ಷರಾಗಿ ಬಹಳಷ್ಟು ಶ್ರಮವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಪ್ರಮುಖರೆನಿಸಿಕೊಂಡಿದ್ದಾರೆ. 2012ರ ಮೇ ತಿಂಗಳಲ್ಲಿ ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ಅಭೂತಪೂರ್ವವಾಗಿ ನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಗೌರವಾಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಸಮ್ಮೇಳನದ ಯಶಸ್ಸಿಗೆ ಕಾರಣರಾಗಿರುತ್ತಾರೆ. ಸ್ಥಾನಿಕ ಬ್ರಾಹ್ಮಣ ಸಮಾಜದ ಬಗ್ಗೆ ಬಹಳಷ್ಟು ಕಳಕಳಿಯನ್ನು ಹೊಂದಿರುವ ಇವರಿಂದ ಮುಂದೆಯೂ ನಮ್ಮ ಸಮಾಜದ ಏಳಿಗೆಗೆ ಶ್ರಮಿಸಬಹುದಾದಂತಹ ಶಕ್ತಿಯನ್ನು ಭಗವಂತನು ಇವರಿಗೆ ಕರುಣಿಸಲಿ ಎಂಬುದು ನಮ್ಮೆಲ್ಲರ ಹಾರೈಕೆ.

ನಮ್ಮ ಸಮಾಜದ ವತಿಯಿಂದ ನಮ್ಮೆಲ್ಲ ಸಂಘ ಸಂಸ್ಥೆಗಳು ಒಟ್ಟು ಸೇರಿ ಬರುವ ಜನವರಿ 14ನೇ ತಾರೀಕು ಸೋಮವಾರ ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಅದ್ದೂರಿ ಅಭಿನಂದನಾ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಒಂದು ದಿನ ಪೂರ್ತಿ ಜರಗಲಿದೆ. ಈ ಉತ್ಸವದಲ್ಲಿ ತಾವೆಲ್ಲ ಭಾಗಿಗಳಾಗಬೇಕಾಗಿ ಎಂ.ಆರ್.ವಾಸುದೇವ ಅಭಿನಂದನಾ ಸಮಿತಿಯ ಪರವಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

**-ಎಂ.ದೇವಾನಂದ ಭಟ್, ಬೆಳುವಾಯಿ**

# ಪಡುಬಿದ್ರಿಯಲ್ಲಿ ವಿಜೃಂಭಿಸಿದ ಕರ್ಣ ಪರ್ವ



ದಿ. 4-11-2012ನೇ ರವಿವಾರ ಅಪರಾಹ್ನ ಪಡುಬಿದ್ರಿ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ ಸಂಘದ ನಿರ್ದೇಶಕರಾದ ಶ್ರೀಯುತ ಉಲ್ಲಾಸ್‌ರಾವ್ ಇವರ ವತಿಯಿಂದ ''ಕರ್ಣ-ಪರ್ವ'' ಎಂಬ ಯಕ್ಷಗಾನ ತಾಳಮದ್ದಳೆ ನಡೆಯಿತು.

ನಮ್ಮ ಸಮಾಜ ಬಾಂಧವರೇ ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ ಎಲ್ಲೂರಿನ ಶ್ರೀಯುತ ಸುಬ್ಬರಾವ್ ಇವರು ಅರ್ಜುನನಾಗಿ ತಮ್ಮ ಅತ್ಯುತ್ತಮವಾದ ಮಾತುಗಾರಿಕೆಯಿಂದ ಎಲ್ಲರ ಮೆಚ್ಚುಗೆ ಪಡೆದರೆ, ಪಡುಬಿದ್ರಿಯ ಶ್ರೀಯುತ ಜಗದಾಭಿರಾಮ ಸ್ವಾಮಿಯವರು ಕರ್ಣನಾಗಿ, ತಮ್ಮ ತೂಕದ, ಗಂಭೀರವಾದ ಮಾತುಗಳಿಂದ ಸಭಿಕರನ್ನು ತಮ್ಮ ಕಡೆಗೆ ಆಕರ್ಷಿಸುವಲ್ಲಿ ಯಶಸ್ವಿಯಾದರು. ಹಾಗೆಯೇ ಕೃಷ್ಣನಾಗಿ ದೇವಾನಂದ ಭಟ್ ಬೆಳುವಾಯಿ ಇವರು ತಾನೂ ಓರ್ವ ಉತ್ತಮ ವಾಗ್ಮಿ ಎಂಬುದನ್ನು ಸಾಬೀತುಗೊಳಿಸಿದರು. ಶಲ್ಯನಾಗಿ ಮಟ್ಟು ಕೃಷ್ಣಕುಮಾರ್ ಹಾಗೂ ಸರ್ಪಾಸ್ತ್ರನಾಗಿ ಉಡುಪಿಯ ವಿಶ್ವನಾಥ ಶ್ಯಾನುಭಾಗ್ ಇವರು ತಮ್ಮ ಪಾತ್ರಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಎಲ್ಲೂರಿನ ಸತೀಶ್ ರಾವ್ ಹಾಗೂ ಸಸಿಹಿತ್ಲು ಶಶಿಧರ ರಾವ್ ಇವರು ತಮ್ಮ ಸುಶ್ರಾವ್ಯ ಕಂಠದ ಭಾಗವತಿಕೆಯಿಂದ ಎಲ್ಲರನ್ನು ಮಂತ್ರಮುಗ್ಧಗೊಳಿಸಿದರು. ಹಿಮ್ಮೇಳದಲ್ಲಿ ಶ್ರೀಯುತ ರಾಜಶೇಖರ್ ರಾವ್, ಶ್ರೀಯುತ ದೇವಾನಂದ ಭಟ್ ಮತ್ತು ಶ್ರೀಯುತ ಎಲ್ಲೂರು ಗಣೇಶ್ ರಾವ್ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಭಾಗವಹಿಸಿದ ಎಲ್ಲಾ ಮಹನೀಯರನ್ನು ಶಾಲು ಹೊದಿಸಿ, ಸನ್ಮಾನಿಸಲಾಯಿತು. ನಮ್ಮ ಸಂಘದ ಕಾರ್ಯದರ್ಶಿಯವರಾದ ಶ್ರೀಯುತ ಸುಧಾಕರ ಬೆಳ್ಳೆಯವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀಯುತ ದೇವಾನಂದ ಭಟ್ ಇವರು ತಮಗೆ ನೀಡಿದ ಈ ಅವಕಾಶಕ್ಕಾಗಿ ಧನ್ಯವಾದವನ್ನಿತ್ತು, ಸಮಾಜ ಬಾಂಧವರು ಅಪೇಕ್ಷಿಸಿದಲ್ಲಿ ಮನೆಮನೆಗಳಲ್ಲಿ ಉಚಿತವಾಗಿ ಕಾರ್ಯಕ್ರಮ ನೀಡುವುದಾಗಿ ಘೋಷಿಸಿದರು. ಅಂತೂ ಈ ಕಾರ್ಯಕ್ರಮವು ಉತ್ತಮವಾಗಿ ಮೂಡಿಬಂದಿತು.

ವರದಿ: ಸೀತಾದೇವಿ ಭಾಸ್ಕರ್ ರಾವ್,
ನಿರ್ದೇಶಕರು, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ.

## ಕೊಡಚಾದ್ರಿ ಚಾರಣ

**ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘದ ಯುವವೇದಿಕೆಯು ದಿ.30-12-2012, ರವಿವಾರದಂದು ಕೊಡಚಾದ್ರಿ ಚಾರಣವನ್ನು ಆಯೋಜಿಸಿದೆ. ಅಂದು ಬೆಳಿಗ್ಗೆ 8 ಗಂಟೆಗೆ ಕುಂದಾಪುರದಿಂದ ಬಸ್ಸಿನ ವ್ಯವಸ್ಥೆ ಇದ್ದು, ಊಟೋಪಚಾರದ ವೆಚ್ಚ ಸೇರಿ ತಲಾ ರೂ.400/-ನ್ನು ನಿಗದಿಪಡಿಸಲಾಗಿದೆ, ಆಸಕ್ತರು ದಿ.20-12-2012ರ ಒಳಗೆ ತಮ್ಮ ಹೆಸರನ್ನು ಶ್ರೀ. ಸಂಪತ್ ಕುಮಾರ್ ಕುಂಭಾಸಿ (9480575352), ಶ್ರೀ. ಚೇತನ್ ಶರ್ಮ, ಮಂಗಳೂರು(9844187083) ಅಥವಾ ಶ್ರೀ ಅಜಿತ್ ಕುಮಾರ್, ಕುಂಜಿಬೆಟ್ಟು(9448108920) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.**

# 'ಮಂಜುವಾಣಿ'ಯಲ್ಲಿ ಧರ್ಮಾಧಿಕಾರಿಯವರ ನುಡಿ

ಶ್ರೀಕ್ಷೇತ್ರ ಧರ್ಮಸ್ಥಳದಿಂದ ಪ್ರಸಾರವಾಗುವ ನವೆಂಬರ್ ತಿಂಗಳ ಮಾಸ ಪತ್ರಿಕೆ 'ಮಂಜುವಾಣಿ'ಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ| ಡಿ. ವೀರೇಂದ್ರ ಹೆಗ್ಗಡೆಯವರು 'ಜಾತಿ ಸಮಾವೇಶ'ದ ವಿಷಯದ ಬಗ್ಗೆ ಬರೆಯುತ್ತಾ ಸ್ಥಾನಿಕ ಬ್ರಾಹ್ಮಣ ಸಮಾಜದ ಬಗ್ಗೆ ಈ ರೀತಿ ಅಭಿಪ್ರಾಯ ಪಡುತ್ತಾರೆ.

''ಇತ್ತೀಚಿಗೆ ಉಡುಪಿಯಲ್ಲಿ ನಡೆದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣರ ಸಮಾವೇಶವು ಒಂದರ್ಥದಲ್ಲಿ ಬಹಳ ದೂರದೃಷ್ಟಿಯನ್ನು ಇರಿಸಿಕೊಂಡು ನಡೆಯಿತು. ವೈಯಕ್ತಿಕ ಲಾಭ ಅಥವಾ ಯಾವುದೇ ಸ್ಥಾನಮಾನಕ್ಕಾಗಿ, ರಾಜಕೀಯ ಲಾಭಕ್ಕಾಗಿ ಹೋರಾಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸದೇ, ದೀರ್ಘಕಾಲದಲ್ಲಿ ಸಮಾಜದಲ್ಲಿ ಆಗಬಹುದಾದ ಬದಲಾವಣೆಗಳು, ಸಮಸ್ಯೆಗಳ ನಿವಾರಣೆಯಂತಹ ಆಕಾಂಕ್ಷೆಗಳನ್ನು ಇರಿಸಿಕೊಂಡು ಇದು ಆಯೋಜಿತವಾಗಿತ್ತು. ಸಾಮಾನ್ಯವಾಗಿ ಇಂತಹ ಸಮ್ಮೇಳನಗಳಲ್ಲಿ ಕೇವಲ ರಾಜಕಾರಣಿಗಳೇ ತುಂಬಿರುತ್ತಾರೆ. ಅಲ್ಲಿ ವಿವಿಧ ಬೇಡಿಕೆಗಳ ಪಟ್ಟಿಯನ್ನು ಮಂತ್ರಿ ಮಹೋದಯರ ಮುಂದಿಡುವ ಕಾರ್ಯ ಸಂಯೋಜಕರಿಂದ ನಡೆಯುತ್ತದೆ. ಧಾರ್ಮಿಕ ನಾಯಕರನ್ನು ಮೂಲೆ ಗುಂಪಾಗಿಸಿಬಿಡುವ ಅಪಾಯವನ್ನು ಕೆಲವು ಸಮ್ಮೇಳನ, ಸಮಾವೇಶಗಳು ತಂದೊಡ್ಡುತ್ತವೆ. ಆದರೆ ಇದರಲ್ಲಿ ಅಂತಹ ಯಾವುದೇ ಕಾರ್ಯ ನಡೆದಿಲ್ಲ ಎನ್ನುವುದೇ ಸಂತಸದ ವಿಷಯ. ಇದು ಮುಂದಿನ ದಿನಗಳಲ್ಲಿ ಬರುವಂತಹ ಸವಾಲುಗಳನ್ನು ಆ ಸಮಾಜ ಹೇಗೆ ನಿಭಾಯಿಸುತ್ತದೆಂಬ ನಿಟ್ಟಿನಲ್ಲಿ ಒಂದು ದಿಕ್ಸೂಚಿಯಾಯಿತು''.

''ಸ್ಥಾನಿಕ ಬ್ರಾಹ್ಮಣರ ಪರಂಪರೆ ಕುರಿತಾಗಿ ನಾನು ಓದಿದ್ದೆ. ಅದರಲ್ಲಿ ಇತಿಹಾಸದ ಅನೇಕ ಪುಟಗಳಲ್ಲಿ ಅವರು ತಮ್ಮ ಶಕ್ತಿಯನ್ನು, ಪ್ರತಿಭೆಯನ್ನು ತೋರಿಸಿರುವುದು ಕಂಡು ಬರುತ್ತದೆ. ಆದರೆ ಕಾಲದ ಹಿಂದಿನ ಘಟ್ಟದಲ್ಲಿ ಪ್ರಬಲ ಸಮಾಜಗಳು ಉಳಿದ ವರ್ಗಗಳ ಮೇಲೆ ತಮ್ಮ ಪ್ರಾಬಲ್ಯ ಸಾಧಿಸಿ ಅವುಗಳಿಗೆ ಮೇಲೆ ಬರಲು ಅವಕಾಶ ಮಾಡಿಕೊಡುತ್ತಿರಲಿಲ್ಲ. ಸಮಾಜದಲ್ಲಿ ಎಲ್ಲರನ್ನೂ ಗುರುತಿಸಬೇಕು. ಅವರವರ ಯೋಗ್ಯತೆಗೆ ತಕ್ಕ ಸ್ಥಾನಮಾನ ನೀಡಬೇಕು. ಒಂದು ಯಂತ್ರ ಸರಿಯಾಗಿ ಕಾರ್ಯ ನಿರ್ವಹಿಸಲು ದೊಡ್ಡ ಬಿಗಿಭಾಗಗಳೊಂದಿಗೆ ಸಣ್ಣ ಪುಟ್ಟ ಬಿಡಿಭಾಗಗಳು ಹೇಗೆ ಅಗತ್ಯವೋ ಹಾಗೆಯೇ ಸಮಾಜದಲ್ಲಿ ಎಲ್ಲರೂ ಒಂದಾಗಿ ಜೀವಿಸುವಾಗ ಎಲ್ಲರ ಪಾತ್ರವೂ ಇರುತ್ತದೆ. ಹಾಗಾದಾಗಲೇ ಸಮಾಜ ಸ್ವಸ್ಥವಾಗಿರಲು ಸಾಧ್ಯ.''

''ಜಾತಿವಾರು ಸಮಾವೇಶ ಅಥವಾ ಸಮ್ಮೇಳನಗಳನ್ನು ನಡೆಸುವುದು ಸ್ಥೂಲ ದೃಷ್ಟಿಯಿಂದ ಅಷ್ಟೇನೂ ಉಚಿತವಲ್ಲ ಎಂದು ಅನಿಸಿದರೂ ಇಂದಿನ ಸಂದರ್ಭದಲ್ಲಿ ಅದು ಒಂದು ರೀತಿಯಲ್ಲಿ ಸರಿಯೆಂದೆನಿಸುತ್ತದೆ. ಏಕೆಂದರೆ ಒಂದು ನಿರ್ದಿಷ್ಟ ಸಮಾಜದ ಏಳು-ಬೀಳು, ಕಷ್ಟ-ಸುಖ, ಪ್ರಗತಿ-ಅಧೋಗತಿ ಮೊದಲಾದುವುಗಳನ್ನೆಲ್ಲಾ ಆಯಾ ಸಮಾಜದ ಮುಖಂಡರು, ಜನಸಾಮಾನ್ಯರು ಒಂದೆಡೆ ಕಲೆತು ಚರ್ಚಿಸಿ ಕ್ರಮ ಕೈಗೊಂಡು ರಾಷ್ಟ್ರೀಯ ಮುಖ್ಯವಾಹಿನಿಯೊಂದಿಗೆ ಸೇರಿಕೊಂಡು ಒಂದು ಗುರಿಯೆಡೆಗೆ ಸಾಗಬೇಕಾದರೆ ಈ ಬಗೆಯ ಸ್ಥಾನಿಕ ಸಮಾವೇಶದಂತಹ ಸಂಘಟಾನಾತ್ಮಕ ಚಟುವಟಿಕೆಗಳು ಮುಖ್ಯ. ಇದಕ್ಕೊಂದು ಉದಾಹರಣೆ ನೀಡಬಹುದಾದರೆ 'Birds of same feather fly together' ಅನ್ನುವ ಇಂಗ್ಲೀಷ್ ಗಾದೆಯಂತೆ ಒಂದೇ ಬಣ್ಣದ ಗರಿಗಳಿರುವ ಪಕ್ಷಿಗಳು ಒಟ್ಟಿಗೆಹಾರುತ್ತವೆ. ಜೊತೆ ಜೊತೆಯಾಗಿಯೇ ಇದ್ದು ಜೊತೆಯಲ್ಲಿಯೇ ಹಾರಾಟವನ್ನು ನಡೆಸಿ ತಮ್ಮ ಉದ್ದೇಶಗಳತ್ತ ಸಾಗುತ್ತವೆ.''

''ನಮ್ಮ ಶ್ರೀ ಧರ್ಮಸ್ಥಳ ದೇವಳದಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ಸ್ಥಾನಿಕ ಬ್ರಾಹಣರಿದ್ದು. ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸುತ್ತಿದ್ದಾರೆ. ಮನಸ್ಸಿನ ಸಂಸ್ಕಾರವನ್ನು ಗುರುತಿಸಿ ವ್ಯಕ್ತಿಗೆ ಸ್ಥಾನಮಾನ ನೀಡುವಾಗ ಸ್ಥಾನಿಕರು ಈ ಗೌರವಕ್ಕೆ ಪಾತ್ರರಾಗುತ್ತಾರೆ.''

''ಹಿಂದಿನ ದಿನಗಳಲ್ಲಿದ್ದ ಸಾಂಪ್ರದಾಯಿಕ ಆಚರಣೆಗಳು, ಧಾರ್ಮಿಕ ವಿಧಿ ವಿಧಾನಗಳು ಈ ದಿನಗಳಲ್ಲಿ ಕಡಿಮೆಯಾಗಿದ್ದರೂ ಈಗ ಮತ್ತೆ ಅಲ್ಲಲ್ಲಿ ಕಂಡು ಬರುವುದು ಸಂತಸದ ವಿಚಾರ. ಮುಂದಿನ ದಿನಗಳಲ್ಲಿ ನಾವು ಶಿಕ್ಷಣಕ್ಕೆ ಒತ್ತು ಕೊಟ್ಟು, ಮೂಲ ಸಂಸ್ಕಾರಗಳನ್ನು ಉಳಿಸಿಕೊಂಡು, ಎಲ್ಲೇ ಹೋದರೂ ಲಾಲಸೆಗಳಿಗೆ ಒಳಗಾಗದೆ ಮೌಲ್ಯಯುಕ್ತ ಜೀವನವನ್ನು ನಡೆಸುವುದರಿಂದ, ಸಮಾಜದ ವ್ಯಕ್ತಿತ್ವ, ಗೌರವ ಉಳಿಯುತ್ತದೆಂಬ ಸಂಗತಿಯನ್ನು ಗಮನಿಸಬೇಕು''.

ಸಂಗ್ರಹ : **ಎಚ್.ಎನ್.ಶ್ಯಾನುಭಾಗ್**

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ

## ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2013

**ತಾ.20-01-2013ನೇ ರವಿವಾರ ಉಡುಪಿಯ ಎಮ್.ಜಿ.ಎಮ್ ಕಾಲೇಜು ಗ್ರೌಂಡ್** ನಲ್ಲಿ ನಡೆಯಲಿದೆ.

**ಆಸಕ್ತ ತಂಡಗಳು 15-01-2013ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ದೇವದಾಸ್ ಶಾಸ್ತ್ರಿ ಆಳುಗೇಲ್ ಹಿರಿಯಡ್ಕ (M : 9482046424), ಮಂಜುನಾಥ ಹೆಬ್ಬಾರ್, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ (M : 9448437893, 9611099894) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.**

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು. 4) ಅಲೆವೂರು ದಿ| ಭುಜಂಗ ರಾವ್ ಮತ್ತು ದಿ| ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡಿದ ನಗದು ಬಹುಮಾನವನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜ್ಯೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 8-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.
**ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.**

- ಅಧ್ಯಕ್ಷರು ಮತ್ತು ಸಂಚಾಲಕರು, ಕ್ರೀಡಾ ವೇದಿಕೆ

ತಾ.20-01-2013 ಬೆಳಿಗ್ಗೆ ಗಂಟೆ 9-00ರಿಂದ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

**ಮಕ್ಕಳ ಮತ್ತು ಮಹಿಳಾ ವಿಭಾಗದ ಸ್ಪರ್ಧೆಗಳ ವಿವರ :** 1) 3-5 ವರ್ಷದೊಳಗಿನ ಮಕ್ಕಳಿಗೆ - **ಬಾತುಕೋಳಿ ನಡಿಗೆ, ಪಾಸಿಂಗ್ ದಿ ಬಾಲ್** 2) 1ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ - **ಒಂಟಿ ಕಾಲಿನ ಓಟ, ಮಣಿ ಹೆಕ್ಕುವುದು** 3) 4ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ - **ನೆನಪು ಶಕ್ತಿ , ಮಣಿ ಪೋಣಿಸುವುದು** 4) 7ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ - **ಸ್ಕಿಪಿಂಗ್ (ಹಗ್ಗ ಅವರೇ ತರಬೇಕು), ಅಲಿಂಬೆಹಣ್ಣಿನ ಓಟ** 5) ಮಹಿಳೆಯರಿಗಾಗಿ - **ಸಂಗೀತ ಕುರ್ಚಿ, ಮೇಣದ ಬತ್ತಿ ಉರಿಸುವುದು.** 6) ಹಿರಿಯ ನಾಗರಿಕ ಮಹಿಳೆಯರಿಗಾಗಿ - **ತಲೆಯ ಮೇಲೆ ಪುಸ್ತಕ ಇಟ್ಟು ನಡೆಯುವುದು.** ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಇದೇ ದಿನ ವಧುವರರ ಮಾಹಿತಿ ಸಂಗ್ರಹ ಕಾರ್ಯಕ್ರಮವನ್ನು ಮಹಿಳಾ ವೇದಿಕೆಯು ಆಯೋಜಿಸಿದೆ. ವಧೂವರರ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಈ ವೇದಿಕೆಯ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ಹೆಸರನ್ನು ನೋಂದಾಯಿಸುವವರು ವಧುವರರ ಭಾವಚಿತ್ರ, ಜಾತಕದ ಪ್ರತಿ, ಇತ್ಯಾದಿ ವಿವರಗಳನ್ನು ನೀಡಿ ವೇದಿಕೆಯಲ್ಲಿ ನೋಂದಾಯಿಸಬಹುದು. ಶ್ರೀಶಾರದಾ ಪತ್ರಿಕೆಯಲ್ಲಿ ವಧುವರರ ಮಾಹಿತಿಯನ್ನು ನೀಡಲು ಆಸಕ್ತಿಯುಳ್ಳವರು ಒಪ್ಪಿಗೆಯನ್ನು ನೀಡಬಹುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

# ಸಂಸ್ಕೃತ ವಾಙ್ಮಯಕ್ಕೆ ಶೃಂಗೇರಿ ಶ್ರೀ ಶಾರದಾ ಪೀಠದ ಕೊಡುಗೆ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ

ಶೃಂಗೇರಿ ಶ್ರೀ ಶಾರದಾ ಪೀಠ ಸಂಸ್ಕೃತ ವಾಙ್ಮಯಕ್ಕೆ ನೀಡಿದ ಕೊಡುಗೆ ಅಪಾರ; ವೇದ-ಶಾಸ್ತ್ರಗಳ ಸಂರಕ್ಷಣೆಗೆ ವಹಿಸುತ್ತಿರುವ ಕಾಳಜಿ ಅನುಕರಣೀಯ. ಈ ಪೀಠದ ಸಂಸ್ಥಾಪಕರಾದ ಶ್ರೀ ಶಂಕರ ಭಗವತ್ಪಾದ ರಿಂದ ಮೊದಲ್ಗೊಂಡು ಇಂದಿನ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ವರೆಗಿನ ಎಲ್ಲ ಜಗದ್ಗುರುಗಳೂ ಅಸಾಧಾರಣ ವಿದ್ವಾಂಸರು; ವೇದ ಶಾಸ್ತ್ರಗಳ ಪೋಷಕರು; ವಿದ್ವಜ್ಜನರಿಗೆ ಆಶ್ರಯದಾತರು. 'ಪದವಾಕ್ಯಪ್ರಮಾಣ ಪಾರಾವಾರ ಪಾರೀಣ' ಎಂಬ ಅವರ ಬಿರುದಾವಳಿಯ ವಾಕ್ಯದಂತೆ ಅವರ ಶಾಸ್ತ್ರಜ್ಞಾನ ಪ್ರಶ್ನಾತೀತವಾದುದು. ಶಿಷ್ಯರಿಗೆ ವೇದ-ಶಾಸ್ತ್ರಗಳ ಭೋಧನೆ, ಗ್ರಂಥರಚನೆ-ಮೊದಲಾವುಗಳಿಂದ ಸಂಸ್ಕೃತವಾಙ್ಮಯಕ್ಕೆ ಅವರು ಅಪಾರವಾದ ಕೊಡುಗೆ ನೀಡಿದ್ದಾರೆ. ಭಾಷ್ಯಗಳು, ವ್ಯಾಖ್ಯಾನಗಳು, ಪ್ರಕರಣ ಗ್ರಂಥಗಳು, ಸ್ತೋತ್ರಗಳು ಇತ್ಯಾದಿಗಳನ್ನು ರಚಿಸಿ, ಸಂಸ್ಕೃತದ ಬೊಕ್ಕಸವನ್ನು ಸಮೃದ್ಧಗೊಳಿಸಿದ್ದಾರೆ. ನೂರಾರು ರಚನೆಗಳು ಇವರದ್ದಾಗಿದ್ದರೂ, ಅವುಗಳಲ್ಲಿ ಕೆಲವು ಲುಪ್ತವಾಗಿವೆ, ಮತ್ತೆ ಕೆಲವು ಪ್ರಕಟವಾಗದೆ ಹಾಗೆಯೇ ಉಳಿದಿವೆ. ಸುಮಾರು ಒಂದು ಸಾವಿರದ ಇನ್ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿರುವ ಶೃಂಗೇರಿಯ ಶ್ರೀ ಶಾರದಾ ಪೀಠ ಸಂಸ್ಕೃತ ವಾಙ್ಮಯಕ್ಕೆ ನೀಡಿದ ಅಪೂರ್ವ ಕೊಡುಗೆಗಳ ಸ್ಥೂಲಪರಿಚಯ ಇಲ್ಲಿದೆ.

**ಶ್ರೀ ಶಂಕರಭಗವತ್ಪಾದರ ಕೊಡುಗೆ**

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಸಂಸ್ಥಾಪಕರಾದ ಶ್ರೀ ಶಂಕರ ಭಗವತ್ಪಾದರು ಪವಿತ್ರ ಭಾರತ ಜನ್ಮ ಕೊಟ್ಟ ಅಸಾಧಾರಣ ತತ್ವ ಜ್ಞಾನಿಗಳಲ್ಲಿ ಪ್ರಮುಖರು. ಅತಿಕಡಿಮೆ ಅವಧಿಯಲ್ಲಿ ಈ ದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಮಾರ್ಗವನ್ನೇ ಬದಲಿಸಿದ ಮಹಾಪುರುಷರು, ಅವರು ಪವಾಡಸದೃಶವಾದ ತಮ್ಮ ಜೀವನ-ಸಾಧನೆಗಳ ಮೂಲಕ ಸನಾತನ ಧರ್ಮಕ್ಕೆ ನೆಲೆ-ಬೆಲೆಗಳನ್ನು ದೊರೆಕಿಸಿಕೊಟ್ಟ ಅದ್ಭುತ ವ್ಯಕ್ತಿತ್ವ ಅವರದು. ಭಾರತೀಯ ತತ್ವಶಾಸ್ತ್ರದ ಇತಿಹಾಸದಲ್ಲಿ ಅವರು ನೆಲೆಗೊಳಿಸಿದ ಉಪನಿಷತ್ ಪ್ರತಿಪಾದಿತವಾದ ಅದ್ವೈತ ವೇದಾಂತ ಬಹಳ ಮುಖ್ಯವಾದ ಸಿದ್ಧಾಂತ. ಇಂತಹ ಯುಗಪುರುಷ ಶಂಕರರು ಶೃಂಗೇರಿಯಲ್ಲಿ ಸುಮಾರು ಹನ್ನೆರಡು ವರ್ಷಗಳ ಕಾಲ ನೆಲಸಿದ್ದು. ಆ ಸಂದರ್ಭದಲ್ಲಿ ವೇದಾಂತವನ್ನು ಸರಳವಾಗಿ ತಿಳಿಸುವ ಹಲವಾರು ಪ್ರಕರಣ ಗ್ರಂಥಗಳನ್ನು ರಚಿಸಿದರು. ಶಿವ ವಿಷ್ಣು-ಗಪತಿ-ದೇವಿ-ಹೀಗೆ ನಾನಾ ದೇವತೆ ಗಳನ್ನು ಸುತ್ತಿಸುತ್ತಾ ಸ್ತೋತ್ರಗಳನ್ನು ರಚಿಸಿದರು. ಶ್ರೀ ಶಂಕರರು ರಚಿಸಿದ ಗ್ರಂಥಗಳನ್ನು ಭಾಷ್ಯಗಳು, ಸ್ತೋತ್ರಗಳು ಮತ್ತು ಪ್ರಕರಣಗಳು ಎಂದು ವಿಭಾಗಿಸಬಹುದು.

ಆಚಾರ್ಯಶಂಕರರ ಭಾಷ್ಯಗಳಲ್ಲಿ ''ಪ್ರಸ್ಥಾನತ್ರಯ ಭಾಷ್ಯ'' ತುಂಬ ಪ್ರಸಿದ್ಧ ವಾದುದು. ಪ್ರಸ್ಥಾನ ಎಂದರೆ ಮಾರ್ಗ ಎಂದರ್ಥ. ಯಾವುದರ ಮೂಲಕ ಗಮನ ಕ್ರಿಯೆಯು ನಡೆಯುವುದೋ ಅದು ಪ್ರಸ್ಥಾನ. -ಪ್ರಸ್ಥಾನ ತ್ರಯ ವೆಂದು ಪ್ರಖ್ಯಾತವಾದ ವೇದಾಂತ ಪ್ರಸ್ಥಾನಗಳು ಮೂರು. ಅವು ಗಳೆಂದರೆ ಶೃತಿ, ಸ್ಮೃತಿ ಮತ್ತು ಸೂತ್ರ. ಇವುಗಳನ್ನು ಅನುಕ್ರಮವಾಗಿ ಉಪನಿಷತ್ತು, ಭಗವದ್ಗೀತೆ ಬ್ರಹ್ಮಸೂತ್ರಗಳೆಂದು ಕರೆಯಲಾಗಿದೆ. ಈ ಮೂರು ಪ್ರಸ್ಥಾನ (ಮಾರ್ಗ)ಗಳ ಮೂಲಕ ಮತ್ತು ಯಾತ್ರೆ ಮಾಡುವುದರಿಂದ ಅಧ್ಯಾತ್ಮ ಮಾರ್ಗದ ಪಥಿಕನು ಬ್ರಹ್ಮವನ್ನು ಹೊಂದುತ್ತಾನೆ. ಈಗ ಉಪಲಬ್ಧವಿರುವ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಶ್ರೀ ಶಂಕರಾಚಾರ್ಯರಿಂದ ರಚಿತವಾದ ಭಾಷ್ಯಗಳೇ ಅತ್ಯಂತ ಪ್ರಾಚೀನ ವಾದುವು. ಈ ಪ್ರಸ್ಥಾನತ್ರಯ ಭಾಷ್ಯಗಳೂ ಸೇರಿದಂತೆ ಭಗರತ್ಪಾದರು ಒಟ್ಟು ಎಂಟು ಭಾಷ್ಯಗಳನ್ನು ರಚಿಸಿದ್ದಾರೆ. ಅವುಗಳೆಂದರೆ 1. ಬ್ರಹ್ಮಸೂತ್ರ ಭಾಷ್ಯ2. ದಶೋಪನಿಷದ್ ಭಾಷ್ಯ3. ಶ್ರೀಮದ್ಭಗವದ್ಗೀತಾ ಭಾಷ್ಯ4. ನೃಸಿಂಹ ತಾಪಿನ್ಯುಪನಿಷದ್ ಭಾಷ್ಯ 5. ಲಲಿತಾ ತ್ರಿಶತಿ ಭಾಷ್ಯ 6. ವಿಷ್ಣುಸಹಸ್ರನಾಮ ಭಾಷ್ಯ 7.ಆಪಸ್ತಂಬ ಮಹರ್ಷಿಗಳ ಆಧ್ಯಾತ್ಮ ಪಟಲದ ಭಾಷ್ಯ ಮತ್ತು 8. ಸನತ್ಸುಜಾತೀಯ ಭಾಷ್ಯ.

'ಪ್ರಕರಣ ಗ್ರಂಥ'ಗಳೆಂದರೆ ವೇದಾಂತ ತತ್ವದ ಪ್ರತಿಪಾದನೆಯನ್ನೊಳಗೊಂಡಿರುವ ಚಿಕ್ಕಗ್ರಂಥಗಳು. ಇವುಗಳಲ್ಲಿ ವೇದಾಂತ ಸಾಧಕಗಳಾದ ವೈರಾಗ್ಯ, ತ್ಯಾಗ ಮತ್ತು ಅದ್ವೈತದ ಮೂಲ ಸಿದ್ಧಾಂತಗಳ ವಿಶದ ವಿವೇಚನೆ ಇದೆ. ಭಾಷ್ಯಗಳ ಭಾಷೆ ಗಂಭೀರ ಮತ್ತು ತರ್ಕ ಶೈಲಿ ತುಂಬ ಕಠಿಣ. ಆದ್ದರಿಂದ ಅವು ಕೇವಲ ವಿದ್ವಾಂಸರಿಗೆ ಮಾತ್ರ ತಮ್ಮನ್ನು ತೆರೆದುಕೊಳ್ಳುತ್ತವೆ. ಹಾಗಾಗಿ ಆಚಾರ್ಯರು ಸಾಮಾನ್ಯ ಜನರಿಗೂ ಅದ್ವೈತದ ಸಂದೇಶ ತಲುಪಬೇಕೆಂದುಸರಳಭಾಷೆಯ ಮತ್ತು ಸುಲಲಿತಶೈಲಿಯ ಇಂತಹ ಪ್ರಕರಣಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಹತ್ತನ್ನು ಪ್ರಕರಣ ಗ್ರಂಥಗಳೆಂದೂ ಉಳಿದ ಇಪ್ಪತ್ತಮೂರನ್ನು ಲಘುಪ್ರಕರಣಗಳು ಎಂದು ಇಲ್ಲಿ ವಿಭಾಗ ಮಾಡಲಾಗಿದೆ. 1. ವಿವೇಕ ಚೂಡಾಮಣಿ 2.ಉಪದೇಶಸಾಹಸ್ರೀ 3. ಪ್ರಬೋಧ ಸುಧಾಕರ 4.ಪ್ರಪಂಚಸಾರ 5.ಅಪರೋಕ್ಷಾನುಭೂತಿ 6.ವಾಕ್ಯವೃತ್ತಿ 7.ಸ್ವಾತ್ಮನಿರೂಪಣ 8.ಆತ್ಮಭೋಧ 9. ಶತ ಶ್ಲೋಕೀ ಮತ್ತು 10. ಸರ್ವವೇದಾಂತ ಸಿದ್ಧಾಂತ ಸಾರ ಸಂಗ್ರಹ ಇವು ಪ್ರಕರಣ ಗ್ರಂಥಗಳಾದರೆ 1.ಅದ್ವೈತಪಂಚರತ್ನ 2.ಅದ್ವೈತಾನುಭೂತಿ 3.ಅನಾತ್ಮ ಶ್ರೀ ವಿಗರ್ಹಣ 4.ಉಪದೇಶ ಪಂಚಕ 5.ಏಕಶ್ಲೋಕ ಪ್ರಕರಣ 6. ಜೀವನ್ಮುಕ್ತಾನಂದ ಲಹರೀ 7.ತತ್ವೋಪದೇಶ 8.ದಶಶ್ಲೋಕೀ 9.ಧನ್ಯಾಷ್ಟಕ 10.ನಿರ್ವಾಣ ಮಂಜರೀ 11.ನಿರ್ವಾಣ ಪಲ್ಕ 12.ಪ್ರಶ್ನೋತ್ತರ ರತ್ನ ಮಾಲಿಕಾ 13.ಪ್ರೌಢಾನುಭೂತಿ 14.ಬ್ರಹ್ಮಜ್ಞಾನಾವಲೀಮಾಲಾ 15.ಬ್ರಹ್ಮಾನು ಚಿಂತನ 16.ಮನೀಷಾಪಂಚಕ 17.ಮಾಯಾಪಂಚಕ 18.ಯತಿಪಂಚಕ 19.ಯೋಗತಾರಾವಲೀ 20.ಲಘು ವಾಕ್ಯವೃತ್ತಿ 21.ಸದಾಚಾರಾನುಸಂಧಾನ 22.ಸ್ವರೂಪಾನುಸಂಧಾನಾಷ್ಟಕ ಮತ್ತು 23.ಸ್ವಾತ್ಮಪ್ರಕಾಶಿಕಾ ಇವು ಲಘುಪ್ರಕರಣಗಳಾಗಿವೆ.


ಭಗವತ್ಪಾದ ಶಂಕರರು ಪರಮಾರ್ಥತಃ ಅದ್ವೈತವಾದಿಗಳಾಗಿದ್ದರೂ. ವ್ಯವಹಾರದಲ್ಲಿ ನಾನಾದೇವತೆಗಳ ಉಪಾಸನೆ ಮತ್ತು ಅದರ ಸಾರ್ಥಕತೆಯನ್ನು ಬಲ್ಲವರಾಗಿದ್ದರು. ಸಗುಣಬ್ರಹ್ಮನ ಉಪಾಸನೆ ನಿರ್ಗುಣಬ್ರಹ್ಮನ ಉಪಲಬ್ಧಿಗೆ ಪ್ರಮುಖಸಾಧನ. ಸಾಧಕನಾದವನು ಸಗುಣ ಬ್ರಹ್ಮನ ಉಪಾಸನೆಯನ್ನು ಮಾಡದೇ ಇದ್ದಲ್ಲಿ ಅವನಿಗೆ ನಿರ್ಗುಣ ಬ್ರಹ್ಮನ ಸಾಕ್ಷಾತ್ಕಾರವಾಗುವುದು ಅಸಾಧ್ಯ. ಆದ್ದರಿಂದ ಆಚಾರ್ಯಶಂಕರರು ಲೋಕಸಂಗ್ರಹಾರ್ಥವಾಗಿ ಸುಗುಣಬ್ರಹ್ಮನ ಉಪಾಸಕರಾಗಿದ್ದರು. ಹಾಗಾಗಿ ಅವರು ಶಿವ, ವಿಷ್ಣು, ಗಣೇಶ, ಶಕ್ತಿ ಇತ್ಯಾದಿ ದೇವತೆಗಳ ಸರಳಸುಂದರ ಸ್ತೋತ್ರಗಳನ್ನು ರಚಿಸಿದ್ದಾರೆ. ಸುಮಾರು 240 ಸ್ತೋತ್ರಗಳು ಶ್ರೀ ಶಂಕರರ ಹೆಸರಿನಲ್ಲಿ ದೊರೆಯುತ್ತಿದ್ದರೂ, ಅವುಗಳ ಶೈಲಿ, ವಸ್ತು, ಇತ್ಯಾದಿಗಳನ್ನು ಪರಿಶೀಲಿಸಿದ ವಿದ್ವಾಂಸರು ಈ ಕೆಳಗಿನ ಅರವತ್ತಾರು ಸ್ತೋತ್ರಗಳು ಮಾತ್ರ ಶಂಕರವಿರಚಿತವೆಂದು ತೀರ್ಮಾನಿಸಿದ್ದಾರೆ.



ಚಿತ್ರ ಕೃಪೆ : ಶ್ರೀ ಶೃಂಗೇರಿ ಶಾರದಾ ಪೀಠ, ಡಾ। ಎಚ್.ವಿ.ನರಸಿಂಹಮೂರ್ತಿ

(ಮುಂದುವರಿಯುವುದು)

# ಕನ್ನಡ ಕವಿಕಾವ್ಯ ಪರಿಚಯ-೪ : ಭಕ್ತ ಕವಿ ಪುರಂದರ ದಾಸರು



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ)

"ಕ್ರಿಮಿಕೀಟಗಳಾದರೆ ಹರಿಯ ನೆನೆಯಲುಂಟೆ?" "ಆರು ಹಿತವರು ನಿನಗೆ ಈ ಮೂವರೊಳಗೆ-ಹೆಣ್ಣು ಹೊನ್ನು, ಮಣ್ಣುಗಳ ಬಗೆಗೆ ಕೇಳಿದ ಪ್ರಶ್ನೆ" "ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ" "ಇರಬೇಕು-ಇಲ್ಲದಿರಬೇಕು" ಪ್ರಾರಬ್ಧ ಕರ್ಮವಿದು" "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವದೇನು?" ಮುಂತಾಗಿ ಲೋಕಾನುಭವವನ್ನು ವಿವರಿಸಿದ್ದಾರೆ. "ಡೊಂಕು ಬಾಲದ ನಾಯಕರೆ" "ಕುರುಡು ನಾಯಿ ತಾ ಸಂತೆಗೆ ಬಂದಿತ್ತು" "ಗಿಳಿಯು ಪಂಜರದೊಳಿಲ್ಲ" ಎಂಬ ವಿಡಂಬನಾತ್ಮಕ ಕೀರ್ತನೆಗಳಿಂದ ಲೋಕದಲ್ಲಿ ಮಾನವ ಜೀವನದ ತೊಳಲಾಟವನ್ನು ಬಹಳ ಮಾರ್ಮಿಕವಾಗಿ ವರ್ಣಿಸಿದ್ದಾರೆ. "ರಮಣನಿಲ್ಲದ ನಾರಿ ಪರರ ಕಣ್ಣಿಗೆ ಮಾರಿ" ಎಂದು ನೆನಪಿಸಿ, "ಸಾಕು ಸಾಕು ಸಂಸಾರ" ಎಂದು ಎಚ್ಚರಿಸಿದ್ದಾರೆ. ಭಗವಂತನನ್ನು ಕಾಣುವ ಹಸಿವೆಯನ್ನು ವಿವರಿಸುತ್ತಾ ಪುರಂದರದಾಸರು "ಹಸಿವೆಯಾಗುತಿದೆ ಯಮ್ಮಾ" ಎಂದು ಹಾಡಿದ್ದಾರೆ. "ಹೊಲೆಯ ಹೊರಗಿಲ್ಲ ಊರೊಳಗಿಲ್ಲವೇ?" ಎಂದು ಕೇಳಿ "ಆಚಾರ ಹೀನನೇ ಹೊಲೆಯ" ಎಂಬುದನ್ನು ಸಾರಿದ್ದಾರೆ. ಬಸವಣ್ಣನವರ ವಚನಗಳ ಸಾರ, ಸರ್ವಜ್ಞನ ತ್ರಿಪದಿಗಳ ಹೂರಣ, ಶ್ರೀ ಕೃಷ್ಣ ಪರಮಾತ್ಮನ ಭಗವದ್ಗೀತೆಯ ನೀತಿ ಇತ್ಯಾದಿಗಳು ಪುರಂದರದಾಸರ ಕೀರ್ತನೆಗಳಲ್ಲವೆಯೆಂದರೆ ಅತಿಶಯೋಕ್ತಿಯಲ್ಲ.

**ಉಗಾಭೋಗ ಮತ್ತು ಸುಳಾದಿ:-** ದಾಸ ಸಾಹಿತ್ಯದಲ್ಲಿ ಕೀರ್ತನೆಗಳಂತೆಯೇ ಉಗಾಭೋಗಗಳು ಮತ್ತು ಸುಳಾದಿಗಳೂ ಕೂಡಾ ಕಂಡು ಬರುತ್ತಿವೆ. ನಿರ್ದಿಷ್ಟ ಸಂಖ್ಯೆಯ ಸಾಲುಗಳಿಲ್ಲದ, ಗೇಯ ಗುಣವಿರುವ, ರಾಗ-ತಾಳಗಳ ವ್ಯವಸ್ಥೆಯಿಲ್ಲದ ರಚನೆಗಳು ಉಗಾಭೋಗಗಳು, "ಜಗವ ಸುತ್ತಿಹುದೆಲ್ಲ ನಿನ್ನ ಮಾಯವಯ್ಯ" "ಮರವಿದ್ದರೇನಯ್ಯ ನೆರಳಿಲ್ಲದನ್ನಕ್ಕ" "ಬಲಿಯ ಮನೆಗೆ ವಾಮನ ಬಂದಂತೆ" "ಮನಶುದ್ಧಿಯಿಲ್ಲದವಗೆ ಮಂತ್ರದ ಫಲವೇನು?" ಮುಂತಾದವು ವಚನಗಳಂತೆಯೇ ಇರುವವು, "ಮಲಗಿ ಪಾಡಿದರೆ ಕುಳಿತು ಕೇಳುವನು" "ನಿನ್ನನ್ನೆ ಪಾಡುವೆ, ನಿನ್ನನೇ ಪೊಗಳುವೆ" "ಒಂದಕ್ಷರವ ಪೇಳಿದವರು ಊರ್ವಿಯೊಳು ಅವರೆ ಗುರುವಯ್ಯ" ("ಕಲಿಸಿದಾತಂ ವರ್ಣ ಮಾತ್ರಂ ಗುರು" ಎಂಬ ಸೋಮೇಶ್ವರ ಶತಕದ ತಾತ್ಪರ್ಯ) ಮುಂತಾದುವು ನೀತಿ ಭೋಧನೆಗಳು, "ಹೃದಯದ ಶುದ್ಧಿಯು ಮುಖ್ಯವು ದೇಹದ ತೊಳೆದರೇನು"? ಎಂದು ಪ್ರಶ್ನಿಸಿದ ಪುಂದರದಾಸರು ನಿಜವಾಗಿಯೂ ಮಾನವ ಜನ್ಮದ ಸಾರ್ಥಕತೆ ಎಲ್ಲಿದೆ ಎಂದು ಸಾರಿದ ದೇವದೂತ ನಾರದರೇ ಎಂಬುದರಲ್ಲಿ ಸಂದೇಹವಿಲ್ಲ.!

(ಮುಂದುವರಿಯುವುದು)

# ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಂಭ್ರಮದ ದೀಪಾವಳಿ


Photo: Raghuveera, Perdoor
ಚಿತ್ರ : ರಘುವೀರ ಪೆರ್ಡೂರು

ಶ್ರೀ ಸಭಾದಲ್ಲಿ ಇತ್ತೀಚೆಗೆ ಸಂಭ್ರಮದ ದೀಪಾವಳಿಯನ್ನು ಆಚರಿಸಲಾಯಿತು. ಶ್ರೀಯುತ ದೇವರಾಯ ಬೆಳ್ಳೆ ದಂಪತಿಗಳು ಹಾಗೂ ಶ್ರೀಯುತ ನಟರಾಜ್ ದಂಪತಿಗಳು ದೀಪ ಬೆಳಗಿಸುವಿಕೆಯ ಮೂಲಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಶಿಕ್ಷಕ ಶ್ರೀ ಸಿ. ರಾಘವೇಂದ್ರ ರಾವ್‌ರವರು ''ದೀಪಾವಳಿ ಆಚರಣೆಯ ಮಹತ್ವ''ದ ಬಗ್ಗೆ ಧಾರ್ಮಿಕ ಉಪನ್ಯಾಸವನ್ನು ನೀಡಿದರು. ನಂತರ ಸಾಂಪ್ರದಾಯಿಕ ಉಡುಗೆ ಸ್ಪರ್ಧೆ, ವಿನೋದಾತ್ಮಕ ಆಟಗಳು, ಕಿರಿಯರಿಂದ ನೃತ್ಯ ಕಾರ್ಯಕ್ರಮ, ಸದನದ ಕಲಾವಿದರಿಂದ 'ಮಹಿಷಾಮರ್ದಿನಿ' ನೃತ್ಯ ರೂಪಕ, ದಾಂಡಿಯ ನೃತ್ಯ ಹಾಗೂ ಸುಡು ಮದ್ದು ಸಿಡಿತದೊಂದಿಗೆ ಕಾರ್ಯಕ್ರಮವವನ್ನು ವೈಭವದಿಂದ ಆಚರಿಸಲಾಯಿತು. ಶ್ರೀಮತಿ ಅರುಣಾ ಸೋಮಶೇಖರ್ ಮತ್ತು ಶ್ರೀಯುತ ನಾಗರಾಜ ಶರ್ಮ ಕಾರ್ಯಕ್ರಮ ಸಂಯೋಜಿಸಿದರೆ ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಸದಸ್ಯರು ಮನೆಯಿಂದಲೇ ತಯಾರಿಸಿ ತಂದ ಸುಗ್ರಾಸ ಭೋಜನವನ್ನು ಪ್ರೀತಿಪೂರ್ವವಾಗಿ ಉಣ ಬಡಿಸಲಾಯಿತು.

ವರದಿ : **ಪಿ. ಶ್ರೀಕಾಂತರಾವ್**

|| ಶ್ರೀ ಮಹಾಗಣಪತಯೇ ನಮಃ || ಓಂ || ಶ್ರೀ ಸುಬ್ರಹ್ಮಣ್ಯಃ ಪ್ರಸೀದತು ||

**ಷಡಾನನಂ ಕುಂಕುಮರಕ್ತವರ್ಣಂ ಮಹಾಮತಿಂ ದಿವ್ಯ ಮಯೂರ ವಾಹನಂ**
**ರುದ್ರಸ್ಯ ಸೂನುಂ ಸುರಸೈನ್ಯನಾಥಂ ಗುಹಂ ಸದಾ ಶರಣಮಹಂ ಪ್ರಪದ್ಯೇ**

## ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ

ಭಗವದ್ಭಕ್ತರೇ, ಕೊಕ್ರಾಡಿ, ತಾ.7-11-2012

ಸ್ವಸ್ತಿ! ಶ್ರೀ ನಂದನ ನಾಮ ಸಂವತ್ಸರದ ಮಾರ್ಗಶಿರ ಶುಕ್ಲ ೬,
**ದಿನಾಂಕ 18-12-2012ನೇ ಮಂಗಳವಾರ**

### ಷಷ್ಠಿ ಮಹೋತ್ಸವವು

ನೆರವೇರಲಿರುವುದು.

ಈ ಪ್ರಯುಕ್ತ ಭಕ್ತಾಭಿಮಾನಿಗಳಾದ ತಾವೆಲ್ಲರೂ ಈ ದೇವತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತಮ್ಮ, ಮನ, ಧನಗಳೊಂದಿಗೆ ಸಹಕರಿಸಿ, ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಭಗವತ್ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಅರ್ಚಕರು** — ಮೊ : 9448630959

**ಧರ್ಮದರ್ಶಿಗಳು** — ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ದತ್ತಿ ಸಂಸ್ಥೆ ಮತ್ತು **ಊರ ಸಮಸ್ತರು**

**ಹಸಿರುವಾಣಿ-ಹೊರೆಕಾಣಿಕೆಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು.**

ಪುಷ್ಯ ಶುದ್ಧ ಷಷ್ಠಿ ದಿನಾಂಕ 17-01-2013ನೇ ಗುರುವಾರದಂದು

### ಕಿರುಷಷ್ಠಿ ಉತ್ಸವವು

ಸಂಪನ್ನಗೊಳ್ಳಲಿರುವುದು.

ವಿಶೇಷ ಕಾರ್ಯಕ್ರಮಗಳು : **ಪೂರ್ವಾಹ್ನ ಪವಮಾನ ಅಭಿಷೇಕ, ಶ್ರೀ ರುದ್ರಾಭಿಷೇಕ, ಶ್ರೀ ಸುಬ್ರಹ್ಮಣ್ಯ ಹೋಮ, ಮಹಾಪೂಜೆ, ಅನ್ನಸಂತರ್ಪಣೆ, ಸಾಯಂ. ರಂಗಪೂಜೆ**

# ರಾಜ್ಯಮಟ್ಟದ ಜ್ಞಾನಸುಧಾ ಸಾಹಿತ್ಯ ಸಮ್ಮೇಳನದ ಕಥಾಗೋಷ್ಠಿಯ ಅಧ್ಯಕ್ಷತೆ ಪ್ರಗತಿ ಭಂಡಿ ಪೆರ್ಡೂರು



ದಿನಾಂಕ 01-11-2012ರಂದು ಕರ್ನಾಟಕ ರಾಜ್ಯೋತ್ಸವ ದಿನದಂದು ಕಾರ್ಕಳದಲ್ಲಿ ರಾಜ್ಯಮಟ್ಟದ ಜ್ಞಾನಸುಧಾ ಸಾಹಿತ್ಯ ಸಮ್ಮೇಳನದ ಕಥಾಗೋಷ್ಠಿಯ ಅಧ್ಯಕ್ಷರಾಗಿ ಪೂರ್ಣಪ್ರಜ್ಞಾ ಕಾಲೇಜಿನ ಪ್ರಥಮ ಪಿಯುಸಿಯ ವಿದ್ಯಾರ್ಥಿನಿ ಕುಮಾರಿ ಪ್ರಗತಿ ಭಂಡಿ ಪೆರ್ಡೂರು ಇವರು ತನ್ನ ಭಾಷಣದಲ್ಲಿ ರಾಮಾಯಣ, ಮಹಾಭಾರತ, ಭಾಗವತ ಹಾಗೂ ಹದಿನೆಂಟು ಪುರಾಣಗಳು ಕಥಾ ಪ್ರದರ್ಶನವಲ್ಲ. ಜೀವನದ ದರ್ಶನ ನಿದರ್ಶನಗಳು. ಕಥೆ ನಿಂತ ನೀರಲ್ಲ, ಸದಾ ಹರಿಯುತ್ತಿರುವ ಪರಿಶುದ್ಧ ನೀರು. ಸಲಿಲ ಜಲ ಪವಿತ್ರ ಗಂಗಾನದಿಯದಾಗಿದೆ. ಇಂದಿನ ಈ ಅವಸರದ ದಿನಗಳಲ್ಲಿ ಸ್ಪರ್ಧಾತ್ಮಕ ಯುಗದಲ್ಲಿ ನನ್ನಂಥ ಎಳೆಯರಿಗೆ ಕಿವಿಮಾತುಗಳನ್ನು ಹೇಳಲೇ ಬೇಕಾಗಿದೆ. ಸ್ನೇಹಿತರೇ, ದಯವಿಟ್ಟು ತಮ್ಮ ವ್ಯಾಸಂಗದೊಂದಿಗೆ ಸಾಹಿತ್ಯದ ಕಡೆಗೂ ಗಮನ ಹರಿಸಿರಿ. ಯಾವುದೇ ಸಾಹಿತ್ಯ ಯಾವುದೇ ಭಾಷೆಯಲ್ಲಿರಲಿ ಓದಿರಿ. ವ್ಯಾಪಕವಾದ ಓದು ಮಾತ್ರ ಸಾಹಿತ್ಯವನ್ನು, ಸಾಹಿತ್ಯ ಮಿತ್ರರನ್ನು, ಸಾಹಿತಿಗಳನ್ನು ನಿರ್ಮಿಸಿಕೊಡಬಹುದು. ಪಾಠೇತರ ಓದು, ಪಾಠ ಪಠಣಕ್ಕೂ ಪೂರಕವಾಗಿಯೇ ಇದೆ ಎನ್ನುವುದನ್ನು ಮರೆಯಬಾರದು. ಈ ಜನ್ಮದಲ್ಲಿ ಎಲ್ಲವನ್ನೂ ಓದಲಾಗುವುದಿಲ್ಲ. ಹಾಗೆಯೇ ಓದದಿರುವುದು ಸಲ್ಲ. ಆಯ್ಕೆ ಮಾಡಿಕೊಂಡು ಓದಬೇಕು. ಓದಿ ಬರೆಯಬೇಕು. ನಾವು ನಾವಾಗಿಯೇ ರೂಪುಗೊಳ್ಳಬೇಕು. ಈ ಸುವರ್ಣಾವಕಾಶದ ಯೌವನವನ್ನು ನಾವು ಸುಮ್ಮನೆ ಕಳೆದುಕೊಂಡರೆ ಜೀವನದ ಚಿನ್ನವನ್ನು ಕಳೆದುಕೊಂಡಂತೆಯೆ. ಪ್ರತಿಯೊಬ್ಬರಲ್ಲಿ ಒಂದೊಂದು ವಿಶಿಷ್ಠ ಶಕ್ತಿ ಇರುತ್ತದೆ. ಸುಪ್ತವಾಗಿರುವ ಶಕ್ತಿಯನ್ನು ಉದ್ದೀಪನಗೊಳಿಸಬೇಕು. ನಾವು ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಓದೋಣ. ಎಲ್ಲಾ ಸಾಹಿತ್ಯ ಪ್ರಕಾರಗಳನ್ನು ಬರೆಯೋಣ. ಬರೆದು ಓದಿ, ಓದಿ ಬರೆದು ನಾವು ಸಾಹಿತಿಗಳಾಗೋಣ. ಶ್ರೇಷ್ಠ ಸಾಹಿತಿಗಳಾಗೋಣ, ಮಹಾ ಸಾಹಿತಿಗಳಾಗೋಣ ಎಂದು ನುಡಿದು ಸಮಾರಂಭ ವನ್ನು ಚಂದಗಾಣಿಸಿದರು.

ವರದಿ: **ಪ್ರಗತಿ ಭಂಡಿ ಪೆರ್ಡೂರು**

# ಮೇಜರ್ ಶೈಲೇಶ್ ಪಿ. ರಾವ್ ಬ್ಲ್ಯಾಕ್ ಕ್ಯಾಟ್ ಕಮಾಂಡೋ ಟ್ರೂಪ್ ಮುಂಬೈ



ಮೇಜರ್ ಶೈಲೇಶ್ ಪಿ.ರಾವ್ ಇವರು ಬೆಂಗಳೂರಿನಲ್ಲಿ ವಾಸವಾಗಿರುವ ಪರಶುರಾಮ ರಂಗರಾವ್ ಮತ್ತು ಶ್ರೀಮತಿ ಮಂಗಳಾರಾವ್ ಇವರ ಪುತ್ರ. ಶ್ರೀ ಪಿ.ಆರ್.ರಾವ್ ದಂಪತಿಗಳು 1980ರಲ್ಲಿ ಮಹಾರಾಷ್ಟ್ರದಿಂದ ಬೆಂಗಳೂರಿಗೆ ಬಂದು ಮೆಡಿಕಲ್ ರೆಪ್ರಸೆಂಟೇಟಿವ್ ಅವರ ಸುಪರ್‌ವೈಸರ್ ಆಗಿ ಕೆಲಸ ಮಾಡಿದರು. ಶ್ರೀ ಪಿ.ಆರ್.ರಾವ್ ಇವರು ಮೂಲತಃ ಉಡುಪಿಯವರಾಗಿದ್ದು ಶ್ರೀಮತಿ ಮಂಗಳಾ ರವರು ಮಹಾರಾಷ್ಟ್ರದ ರತ್ನಗಿರಿ ಮೂಲದ ಜೋಷಿ ಬಳಗದವರು. ಪುಣೆಯಲ್ಲಿ ಜನಿಸಿದ ಶ್ರೀ ಶೈಲೇಶ್ ಇವರು ಕೆ.ಎಲ್.ಇ. ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಪಡೆದರು. ಆಗ ಅವರು ಎನ್‌ಎಸ್‌ಸಿಯಲ್ಲಿದ್ದು ಕಾಲೇಜಿನ ಫುಟ್‌ಬಾಲ್ ಟೀಂನಲ್ಲಿ ಉತ್ತಮ ಆಟಗಾರರಾಗಿದ್ದರು. ಇವರ ತಂಗಿ ಶೀತಲ್ ರಾವ್ ಇಂಜಿನಿಯರಿಂಗ್ ಮುಗಿಸಿ ACCENTUREನಲ್ಲಿ ಕೆಲಸ ಮಾಡಿ ಮದುವೆಯ ನಂತರ ದುಬೈಯಲ್ಲಿದ್ದಾರೆ. ಶೈಲೇಶ್ ಬಿ.ಎಸ್ಸಿ.ಬಳಿಕ ಒಂದು ಮೊಬೈಲ್ ಕಂಪನಿಯಲ್ಲಿ ಕೆಲಸ ಮಾಡಿದರು. ಬಳಿಕ ಭಾರತ ಸರ್ಕಾರದ ARMY, NAVY ಹಾಗೂ AIRFORCE ಗಳ ಪರೀಕ್ಷೆಯಲ್ಲಿಯೂ, ವೈದ್ಯಕೀಯ ಪರೀಕ್ಷೆಯಲ್ಲಿಯೂ ಪಾಸಾದರು. ಆರ್ಮಿಯಿಂದ ಅವರಿಗೆ ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿ ಚೆನ್ನೈಗೆ ಸೇರುವಂತೆ ಆದೇಶ ಬಂತು. ಟ್ರೈನಿಂಗ್ ಬಳಿಕ ಅವರು ಲೆಫ್ಟಿನೆಂಟ್ ಪದವಿ ಪಡೆದು ಹೈದರಾಬಾದ್, ಪಠಾಣ್‌ಕೋಟ್, ಆಗ್ರಾದಲ್ಲಿ ಕೆಲವು ತಿಂಗಳು ಟ್ರೈನಿಂಗ್ ಪಡೆದ ಬಳಿಕ ಗುಲ್ಮಾರ್ಗ್, ಸಿಕ್ಕಿಂ ಕಡೆ ಕೆಲಸ ಮಾಡಿ ಮತ್ತೆ ಪದೋನ್ನತಿ ಹೊಂದಿ, ಕ್ಯಾಪ್ಟನ್ ಆಗಿ ಈಗ ಮೇಜರ್ ಹುದ್ದೆಯಲ್ಲಿದ್ದಾರೆ. ಸದ್ಯ ಅವರು ಮುಂಬೈಯ BLACK CAT COMMANDO TROOPನಲ್ಲಿ ಮೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಇವರ ಸಾಧನೆಗೆ ಶ್ರೀಶಾರದಾ ಬಳಗದ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಭಾರತೀಯ ಸೇನೆಯಲ್ಲಿ ಇವರು ಇನ್ನೂ ಹೆಚ್ಚಿನ ಸಾಧನೆ ಮಾಡುವಂತಾಗಲಿ ಎಂದು ನಮ್ಮೆಲ್ಲರ ಆಶಯ.

ವರದಿ: **ಆನಂದ ರಾವ್ ಉಡುಪಿ**

*Krishna Rao*
Ph : 2520652
Mob. : 9902029048
**KISHAN**
**Studio & Video**
**Indoor Photography & Port Folio Photography, Video & Mixing, Lamination**
MAIN ROAD, MAJOOR & BANTAKAL.

# ಮಿಸ್ ನಿದ್ರಾ! ಲಘು ಹರಟೆ



- ವೈ. ಮೋಹನ ರಾವ್

ಮಿಸ್ ನಿದ್ರಾ – ಯಾರಪ್ಪಾ ಇದು ಎಂದು ಮೂಗಿನ ಮೇಲೆ ಕೈ ಇಡಬೇಡಿ. ಈಕೆ ಯಾರ ಅಪ್ಪನೂ ಅಲ್ಲ. ಯಾರ ಅಮ್ಮನೂ ಅಲ್ಲ. ಮಿನುಗು ತಾರೆಯಿರಬಹುದೆಂದು ಸಂಶಯ ಬರಬಹುದು. ಹೂ. ಮಿನುಗು ತಾರೆಯೂ ಅಲ್ಲ, ಅಭಿನಯ ಶಾರದೆಯೂ ಅಲ್ಲ. ಅರೆ! ಹಾಗಾದರೆ ಕಾಲೇಜು ಕನ್ಯೆ ಇರಬೇಕು. ಕಾಲೇಜು ಕನ್ಯೆಯೂ ಅಲ್ಲ–ಬೀದಿ ಬೆಡಗಿಯೂ ಅಲ್ಲ. ಹಾಗಾದ್ರೆ ಯಾವುದೋ ಕಂಪನಿಯಿಂದ ತಯಾರಾಗುವ ನಿದ್ರಾ ಗುಳಿಗೆಯ ಹೆಸರಿರಬೇಕು. ಛೇ! ಛೇ! ಈ ಹೆಸರಿನ ನಿದ್ರಾ ಗುಳಿಗೆ ಬಂದು ಬಿಟ್ಟರೆ ಯಾರಿಗೂ ಉಳಿಗಾಲ ಇರಲಿಕ್ಕಿಲ್ಲ. ಹಾಗಾದ್ರೆ ಇನ್ನು ಬಿಡುಗಡೆ ಯಾಗಲಿರುವ ಯಾವುದೋ ಸಿನಿಮಾದ ಹೆಸರಿರಬಹುದು. ಸಿನಿಮಾ ಹೆಸರು ಇರಲಿಕ್ಕಿಲ್ಲ.

ಮಿಸ್ ನಿದ್ರಾ – ಈಕೆ ಎಂದು ಸಂಬೋಧಿಸಿದ್ದುಂಟು. ಯಾಕೆಂದರೆ ನಿದ್ರಾ ಹೆಸರಿನ ಹಿಂದೆ ಮಿಸ್ ಇರುವುದರಿಂದ. ಈಕೆಯ ವಶಕ್ಕೆ ಬಾರದವರೇ ಇಲ್ಲ. ಮುದುಕರು, ಮುದುಕಿಯರು ತರುಣ ತರುಣಿಯರು ಬಾಲ ಬಾಲೆಯರು ಬಡವ ಬಲ್ಲಿದರು, ಎಲ್ಲರಿಗೂ ಬೇಕು ಮಿಸ್ ನಿದ್ರಾ. ಗಾಬರಿಯಾಗಬೇಡಿ. ಎಲ್ಲರಿಗೂ ಬೇಕಾದ ನಿದ್ದೆಯೇ ಮಿಸ್ ನಿದ್ರಾ. ಛೀ! ನಿದ್ದೆಯೋ ಎಂದು ತುಚ್ಛೀಕರಿಸಬೇಡಿ ಯಾಕೆಂದರೆ ದಿನದ 24 ಗಂಟೆಯೂ ನಿದ್ದೆ ಮಾಡುವವರಿಲ್ವೆ? ಅಲ್ಲಲ್ಲಿ ಮಿಸ್ ನಿದ್ರಾಳ ವಶಕ್ಕೆ ಹೋಗುವವರಿಲ್ಲವೆ? ನಿದ್ರೆ ಬಾರದವರಿಗೂ ನಿದ್ರೆ ಮಿಸ್ಸೆ?

ನಿದ್ರಾಳ ಕೆಲವು ಅವತಾರಗಳನ್ನು ಕೇಳಿ. ಬಹಳ ಸ್ವಾರಸ್ಯಕರದ್ದು. ದಶಾವತಾರ, ಲಂಚಾವತಾರ ಮತ್ತು ಬೇರೆ ಬೇರೆ ಅವತಾರಗಳು ಈಗ ಇವೆಯಲ್ಲ, ಹಾಗೆಯೇ ನಮ್ಮ ಮಿಸ್ ನಿದ್ರಾಳ ಅವತಾರಗಳು ಹಲವು.

**ಕಾಲೇಜು ಪ್ರಿಯೆ**

ಮಿಸ್, ನಿದ್ರೆ ಉತ್ತಮೋತ್ತಮ ಅವತಾರ ತಾಳುವುದು ಶಾಲಾ ಕಾಲೇಜುಗಳಲ್ಲಿ. ಅಧ್ಯಾಪಕರು ತಮ್ಮ ಹರಿಕಥೆಯನ್ನು ಮಾಡುತ್ತಾ ಇದ್ದಾರೆ. ಶಿಷ್ಯ ವರ್ಗದವರು ಅರ್ಥಾತ್ ವಿದ್ಯಾರ್ಥಿಗಳು ತಮ್ಮ ತಮ್ಮ ಜಾಗದಲ್ಲಿ ಕುಳಿತು ಧ್ಯಾನ ಮಗ್ನರಾಗಿದ್ದಾರೆ. ಶಿಷ್ಯೋತ್ತಮ, ಹಣದುಬ್ಬರವೆಂದರೇನು? ಎಂದು ಅಧ್ಯಾಪಕರು ಅಬ್ಬರಿಸುತ್ತಾರೆ. ಆದರೆ ಈ ಶಿಷ್ಯೋತ್ತಮನು ಧ್ಯಾನ ಸಮಾಧಿಯಿಂದ ಎಚ್ಚಂತೆ ಕಾಣುವುದಿಲ್ಲ. ಆ ನಾಲ್ಕು ಗೋಡೆಗಳ ಮಧ್ಯೆ ಮಿಸ್ ನಿದ್ರಾ ದೇವಿಯ ಆಶೀರ್ವಾದವನ್ನು ಪಡೆಯುವುದ ಕ್ಕೋಸ್ಕರ ಶಿಸ್ತಿನಿಂದ ಧ್ಯಾನ ಮಗ್ನನಾಗಿರುವಂಥ ಶಿಷ್ಯೋತ್ತಮನನ್ನು ಎಚ್ಚರಿಸುವುದು ಪಾಪ ವಲ್ಲವೆ? ಅದಕ್ಕಾಗಿಯೇ ಮತ್ತೆ ರಾಕೇಟುಗಳ ಹಾರಾಟ ಶುರುವಾಗುವುದು. ರಾಕೇಟುಗಳ ಹಾರಾಟ ಸಹಜವೆನ್ನಿ. ಮುಂದುವರಿದ ದೇಶಗಳಲ್ಲಿ ಚಂದ್ರಮನಲ್ಲಿಗೆ ರಾಕೇಟುಗಳನ್ನು ಹಾರಿಸುತ್ತಿರುವಾಗ ಇಲ್ಲಿ ಕ್ಲಾಸುಗಳಲ್ಲಿಯಾದರೂ ರಾಕೇಟುಗಳ ಹಾರಾಟ ನಡೆಸಬೇಕು.

ಮಿಸ್ ನಿದ್ರಾಳ ಯಶಸ್ವೀ ಅವತಾರ ವಾಗುವುದು ಕೆಲವರ ಬ್ರೇಕೂ ಇಲ್ಲದ (ಬೇಕೂ ಇಲ್ಲದ) ಬೋರ್ ಮಾತುಗಳನ್ನು ಕೇಳುತ್ತಿರುವಾಗ. ಏನೇನೋ ಹೇಳುತ್ತಾ ಇರುತ್ತಾನೆ. ಅವನೊಬ್ಬ ಗೆಳೆಯ ಇಂಜೀನಿಯರನ ಮಿತ್ರ ಫ್ಯಾಕ್ಟರಿ ಮೆನೇಜರನಂತೆ. ಈ ಮಿತ್ರನ ಅಣ್ಣ ದೊಡ್ಡ ಸಾಹಿತಿಯಂತೆ. ಇಲ್ಲಿಗೇ ಮುಗಿಯುವುದಿಲ್ಲ. ಮತ್ತೆ ತನ್ನ ಸ್ವಂತದ ಸಾಹಸಗಳ ಸವಿವರ ಕೊಡುತ್ತಾನೆ. ತಾನು ದೊಡ್ಡ ಕ್ರಿಕೆಟರ್ ಅಂತೆ. ಒಂದು ಸಲ ಒಂದೇ ಓವರಿನಲ್ಲಿ ಏಳು ವಿಕೇಟು ಪಡೆದಿದ್ದಂತೆ. ಸ್ವೀಟು ತಿನ್ನುವ ಸ್ಪರ್ಧೆಯಲ್ಲಿ ಬರೇ ಹತ್ತು ಗುಲಾಬ್ ಜಾಮ್ ತಿಂದು ಗೆದ್ದಂತೆ – (ಗೆದ್ದದ್ದು ಬೇರೆಯವರೆನ್ನಿ) ಇನ್ನು ಅವನಿಗೆ ಜೋಬ್ ಸಿಕ್ಕಿದ್ದು ಬಹಳ ಇಸಿ ಅಂತೆ. (ಇಸಿ ಅಂದರೆ ಗೊತ್ತಿದೆಯಲ್ಲಾ) ಅದೂ ಅವರೇ ಕರೆದು ಕೊಟ್ಟ ಕೆಲಸವಂತೆ. ಈಗ ಅಲ್ಲಿ ಅವನು ದೊಡ್ಡ ಫಿಗರ್ ಅಂತೆ. ಆದರೆ ಅವನ ಫಿಗರ್ ನೋಡುವ ಸಾಮರ್ಥ್ಯ ಈಗ ನಮ್ಮಲ್ಲಿ ಉಳಿದೇ ಇರುವುದಿಲ್ಲ. ಯಾಕೆಂದರೆ ಅಷ್ಟರಲ್ಲೇ ನಾವು ಮಿಸ್ ನಿದ್ರಾ ದೇವಿಯ ಬಲೆಯಲ್ಲಿ ಬಿದ್ದಿರುತ್ತೇವೆ.

ಮಿಸ್, ನಿದ್ರಾಳ ಇನ್ನೊಂದು ಅವತಾರವಾಗುವುದು ಸಿನಿಮಾ ಥಿಯೇಟರಿನಲ್ಲಿ. ಬಹಳ ರಹಸ್ಯದ ಸಿನೆಮಾ ಎಂದು ಎನಿಸಿ ಹೋಗುವುದು. (ಪೋಸ್ಟರ್ ನೋಡಿ) ಅಲ್ಲಿ ರಹಸ್ಯವೂ ಇಲ್ಲದೆ ಹಾಸ್ಯವೂ ಇಲ್ಲದೆ ತ್ಯಾಜ್ಯವೆಂದು ಕಂಡು ಬಂದಾಗ ಒಂದೇ ಸಮನೆ ತಿರುಗುತ್ತಿರುವ ಫ್ಯಾನಿನಡಿಯಲ್ಲಿ ಮಿಸ್ ನಿದ್ರಾ ದೇವಿಯ ಆಲಿಂಗಕ್ಕೊಳಗಾಗುತ್ತೇವೆ. ಜನ ಗಣ ಮನ ಆದಾಗಲೇ ನಮಗೆ ಮಿಸ್ ನಿದ್ರಾ ದೇವಿಯಿಂದ ಮುಕ್ತಿ.

ಬಯಲಾಟ ನೋಡಿದ ಮರು ದಿನವಂತೂ ಮಿಸ್ ನಿದ್ರಾಳ ಅವತಾರವೇ ಅವತಾರ. ಅಲ್ಲಿಯ ಅವತಾರಗಳಿಗೆ ಇಲ್ಲಿ ಸಾಕ್ಷಾತ್ಕಾರ. ನಿಂತಲ್ಲಿ, ಕೂತಲ್ಲಿ, ಬಿದ್ದಲ್ಲಿ ಮಿಸ್ ನಿದ್ರಾ. ಚೆಂಡೆ ಮದ್ದಲೆ–ಭಾಗವತರು, ಬರೀ ರಾಕ್ಷಸರು. ಏಳಿರಿ ಎಂದು ಎಬ್ಬಿಸಿದಾಗ ಸೀದಾ ಸ್ನಾನ ಗೃಹಕ್ಕೆ ಬಿನಾಕಾ ಟೂಥ್ ಪೇಸ್ಟ್ ಹಿಡಿದುಕೊಂಡು ಸಿನಿಮಾ ಸ್ಲೈಡ್ ರೀಲಿನಲ್ಲಿ ತೋರಿಸಿದ ರೀತಿಯಲ್ಲೇ ಹಲ್ಲು ಉಜ್ಜುತ್ತಾರೆ. ಮತ್ತೆ ಮತ್ತೆ ಉಜ್ಜುತ್ತಾರೆ. ಆದರೆ ಉಳಿದವರು ಕಿಸಕ್ಕನೆ ನಕ್ಕಾಗ ಮಾತ್ರ ಗೊತ್ತು. ಅದು ಸಂಜೆ 6 ಘಂಟೆಯೆಂದು.

**ಶರಾಬಿಗಳನ್ನು ಬಿಡೊಲ್ಲ**

ಶರಾಬಿಗಳನ್ನಂತೂ ಮಿಸ್ ನಿದ್ರಾ ದೇವಿ ನುಚ್ಚು ನೂರು ಮಾಡಿ ಬಿಡುತ್ತಾಳೆ. ನವಿಲು



ನಾಟ್ಯ ಮಾಡಿ, ಹುಚ್ಚನ ನಟನೆ ಮುಗಿಸಿ ಹತ್ತಿರವಿದ್ದವರಿಗೆ 'ಡಿಶುಂ ಡಿಶುಂ' ಎಂದು ಹೊಡೆದದ್ದು–ಹೀಗೆ ವಿವಿಧ ಏಕ ಪಾತ್ರಾಭಿನಯಗಳನ್ನು ಪ್ರದರ್ಶಿಸಿ ಸೋತು ಬಿದ್ದು ಎದ್ದು ಕಡೆಗೆ ನಿದ್ರಾ ದೇವಿಯ ಶರಣು ಹೋಗುತ್ತಾರೆ. ಎಲ್ಲಿಯಾದರಲ್ಲಿ ಸುಹಾನ ಸಫರ್ ಮುಗಿದಲ್ಲಿ.

ಇನ್ನಂತೂ ಕೆಲವು ಕಚೇರಿಗಳಲ್ಲಿ ಮಿಸ್ ನಿದ್ರಾ ದೇವಿಯ ಕಾಟ ಬಹಳ ಜಾಸ್ತಿ. ಹೇಳುವುದು ಕೇಳಿಲ್ವಾ? ಏನು ಈ ಮಂದಿ ನಿದ್ರೆ ಮಾಡುತ್ತಾ ಇದ್ದಾರಾ? ನಮಗೆ ಇನ್ನೂ ಉತ್ತರ ಬಂದಿಲ್ಲ. ಬಿಲ್ಲು ಇನ್ನೂ ಪಾಸಾಗಿಲ್ಲ. ಇಂಟರ್‌ವೀವ್ ಆಗಿ ಕೆಲ ತಿಂಗಳುಗಳು ಕಳೆದವು. ಇನ್ನೂ ಸುದ್ದಿಯಿಲ್ಲ. ಈ ರೀತಿಯಲ್ಲಿ ಮಿಸ್ ನಿದ್ರಾ ದೇವಿಯ ಜಾಲಕ್ಕೆ ಬೀಳುವವರ ವಂಶವೃಕ್ಷ ಬೆಳೆದು ಬಿಟ್ಟಿದೆ.

ಪರೀಕ್ಷೆಗಳು ಹತ್ತಿರ ಬರುವಾಗ ವಿದ್ಯಾರ್ಥಿಗಳಿಗೆ ಮಿಸ್ ನಿದ್ರಾ ದೇವಿಯ ಉಪದ್ರವ ಜಾಸ್ತಿ. ಪುಸ್ತಕವನ್ನು ಹಿಡಿದು, ಕೆಲವು ವಾಕ್ಯಗಳನ್ನು ಓದುವಷ್ಟರಲ್ಲೇ ಮಿಸ್ ನಿದ್ರಾ ದೇವಿಯ ಆಗಮನವಾಗುತ್ತದೆ. ತಲೆ ಮೇಜಿನ ಮೇಲೆ ಪುಸ್ತಕ–ತಲೆದಿಂಬು ಲೈಟು ಉರಿಯುತ್ತಾ ಇರುತ್ತದೆ. ಪರೀಕ್ಷೆಗೆ ಬಹಳ ತಯಾರಿ ಎಂದು ಯಾರಾದರೂ ಎಣಿಸಬೇಕು. ಆದರೆ ಒಳಗೆ ಮಿಸ್ ನಿದ್ರಾದೇವಿ ತಾಂಡವವಾಡುತ್ತಿದ್ದಾಳೆ ಎಂದು ಅವರಿಗೇನು ಗೊತ್ತು?

ಸೈಟ್ ನೋಡಲು ನೈಟ್ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೀರಿ ಎಂದು ಇಟ್ಟುಕೊಳ್ಳೋಣ. ಲೈಟು ಒಫ್ ಇದ್ದರಂತೂ ಅವಸ್ಥೆ ಅವ್ಯವಸ್ಥೆ, ಮಿಸ್ ನಿದ್ರಾ ದೇವಿಯ ಪ್ರೇರಣೆಯಿಂದಾಗಿ ಯಾರದೋ ತಲೆ ನಮ್ಮ ಭುಜದ ಮೇಲೆ ನೇತಾಡಲು ಶುರುವಾಗುವುದು. ನಮ್ಮ ಭುಜವನ್ನು ಕೂಡಾ ಲಕುರಿ ಬಸ್ಸಿನವರು ಒದಗಿಸಿಕೊಟ್ಟಿರುವ ಒಂದು ಸೌಕರ್ಯ ಎಂದು ಅವರು ಎಣಿಸಿರಬೇಕು. ಇನ್ನು ನಾವು ಕೂಡಾ ಮಿಸ್ ನಿದ್ರಾಳಿಂದ ಪ್ರಭಾವಿತರಾದರೆ ಅವರ ಭುಜವನ್ನು ಹಾಗೆಯೇ ಎಂದು ಎಣಿಸಿದರೆ ಸಮಸ್ಯೆಯಿಲ್ಲ. ಕೆಲವೊಮ್ಮೆ ಕಣ್ಣು ತೆರೆಯುವಾಗ ಯಾವುದೋ ಆಸ್ಪತ್ರೆಯಲ್ಲಿರುವುದುಂಟು. ಡ್ರೈವರ್ ಮಹಾಶಯರನ್ನು ಮಿಸ್ ನಿದ್ರಾದೇವಿ ಆಕ್ರಮಿಸಿದರೆ.

ಬೋರು ಹೊಡೆದಾಗ ಪ್ರತ್ಯಕ್ಷವಾಗುವವರು ಇನ್ನು ಕೆಲವರಿದ್ದಾರೆ. ಅವರಿಗೆ ಒಂದೇ ಕೆಲಸ. ಬೇರೆಯವರನ್ನು ಟೀಕಿಸುವುದು ತಮ್ಮ ಎಲ್ಲಾ ಸಂಬಂಧಿಕರಿಂದ ಹಿಡಿದು ದೇಶೀ ವಿದೇಶಿಯರನ್ನು ಟೀಕಿಸುವ ಇದರ ವಾಕ್ ಪ್ರವಾಹವು ಅವ್ಯಾಹತವಾಗಿ ಧುಮುಕುತ್ತಿರುವುದು. ಇವರಿಗೆ ಬೇರೆಯವರ ಕಷ್ಟಕಾರ್ಪಣ್ಯಗಳ ಅರಿವಿರುವುದಿಲ್ಲ. ತಮ್ಮ ಮನೆಯಲ್ಲಿ ಕೂತು ಉಣ್ಣುವ ಜಾತಿ ತನ್ನ ಮನೆಯೇ ತನ್ನ ಜಗತ್ತು ಎಂದು ತಿಳಿದಿರುವ ಇವರ ಸ್ವಾರ್ಥ ಮನೋಭಾವದ ವಾಗ್ಝರಿ ತನ್ನ ಪರಮಾವಧಿಯನ್ನು ಮುಟ್ಟುವಷ್ಟರಲ್ಲಿ ನಮ್ಮನ್ನು ಮಿಸ್ ನಿದ್ರಾದೇವಿ ಆಹ್ವಾನಿಸುತ್ತಾಳೆ.

ಕೆಲವರ ಭಾಷಣ ಕೇಳುವಾಗಲಂತೂ ನಮಗೆ ನಿದ್ರಾ ದೇವಿಯೇ ಗತಿ. ಯಾರದೋ ಒತ್ತಾಯಕ್ಕೆ ಕಟ್ಟು ಬಿದ್ದು ಭಾಷಣ ಕೇಳಲು ಹೋಗುವ ಪ್ರಸಂಗ ಒಂದೊಂದು ಸಲ ಬರುತ್ತದೆ. ಭಾಷಣಗಾರ ತನ್ನ ಅಪೂರ್ವ ಭಾಷಣ ಪ್ರತಿಭೆಯನ್ನು ಪ್ರದರ್ಶಿಸುವ ಸಲುವಾಗಿ ಅದ್ಭುತವಾಗಿ ಪೀಠಿಕೆಯನ್ನು ಶುರು ಮಾಡುತ್ತಾನೆ. ಹಲವು ಸಲ ಮೇಜನ್ನು ಗುದ್ದುತ್ತಾನೆ. ಆಗ ಮಿಸ್ ನಿದ್ರಾದೇವಿ ನಮ್ಮಿಂದ ದೂರ ಸರಿಯುತ್ತಾಳೆ.

ಕುಂಭಕರ್ಣನಿಗೆ ಮಿಸ್ ನಿದ್ರಾ ದೇವಿಯೆಂದರೆ ಬಹಳ ಇಷ್ಟವಿರಬೇಕು. ಅವನು ಎಷ್ಟೋ ಸಮಯದ ವರೆಗೆ ಮಿಸ್ ನಿದ್ರಾಳನ್ನು ಬಿಡುತ್ತಿರಲಿಲ್ಲವಂತೆ. ಅವನು ಬೇರೆಯವರೆಲ್ಲರ ನಿದ್ರೆಯನ್ನು ಕಂಟ್ರಾಕ್ಟಿಗೆ ತಗೊಂಡಿದ್ದನೋ ಏನೋ. ಅಂತೂ ಉಳಿದವರೆಲ್ಲರಿಗೆ ಕುಂಭಕರ್ಣ ಹಾಗೂ ಮಿಸ್ ನಿದ್ರಾದೇವಿಯವರ ಮೋಜಿನ ಸಮಯದಲ್ಲಿ ನಿದ್ರೆ ಬರೀ ಮಿಸ್ಸೇ.

ಅರ್ಜುನನು ಕೃಷ್ಣನಲ್ಲಿಗೆ ಯುದ್ಧ ಸಹಾಯ ಕೇಳಲು ಹೋದ. ದುರ್ಯೋಧನನು ಹೋದ. ಆದಷ್ಟು ಬೇಗ ಹಾಳಾಗಿ ಹೋದ ಆದರೆ ಅವರಿಬ್ಬರೂ ಕಂಡುದೇನು? ಶ್ರೀ ಕೃಷ್ಣ ಮಿಸ್ ನಿದ್ರಾ ದೇವಿಯ ಬಂಧನದಲ್ಲಿ. ದುರ್ಯೋಧನ ಕೃಷ್ಣನ ಕಾಲ ಬುಡದಲ್ಲಿ ಕುಳಿತ. ಎಷ್ಟೆಂದರೂ ಕೃಷ್ಣದೇವರು ಆಗಿನ ದೊಡ್ಡವರು. ಅವನ ಆರಾಧನೆಯೂ ಸಫಲಾಯಿತು. ಯಾಕೆಂದರೆ ಶ್ರೀಕೃಷ್ಣ ಪರಮಾತ್ಮನು ಮಿಸ್ ನಿದ್ರಾ ದೇವಿಗೆ ಗುಡ ಬೈ ಹೇಳಿ ಎದ್ದಾಗ ಮೊದಲು ಅರ್ಜುನನನ್ನೇ ಕಂಡನು. ಮತ್ತು ಅವನ ಸಾರಥಿತನವ ಕೈಗೊಂಡನಂತೆ.

ಕೆಲವರನ್ನಂತೂ ಮಿಸ್ ನಿದ್ರಾಳಿಗೆ ಕಂಡರಾಗದು. ಅವರ ಹತ್ತಿರ ಅವಳ ಸುಳಿವೇ ಇರುವುದಿಲ್ಲ. ಅದಕ್ಕಾಗಿಯೇ ಕೆಲವರು ಕಥೆ ಪುಸ್ತಕಗಳನ್ನು ಓದಲು ಶುರು ಮಾಡುವರು. ಓದುತ್ತಾ ಮಿಸ್ ನಿದ್ರಾ ದೇವಿಯ ಆಗಮನಕ್ಕಾಗಿ ಹಾತೊರೆಯುವರು. ಹಾಸಿಗೆಯಲ್ಲಿ ನಿದ್ರಾದೇವಿಯನ್ನು ಕಾಣದೆ ಒದ್ದಾಡುವರು. ಕೊನೆಗೆ ಆ ಕಥೆ ಪುಸ್ತಕಗಳ ಪ್ರಭಾವದಿಂದಾಗಿ ಮಿಸ್ ನಿದ್ರಾ ನಿದ್ರಾಹೀನರಿಗೆ ಶರಣಾಗತಳಾಗುವಳು. ಕೆಲವು ಕಥೆ ಪುಸ್ತಕಗಳು ಇರುವುದೂ ಬರೇ ಮಿಸ್ ನಿದ್ರಾ ದೇವಿಗಾಗಿಯೇ ಅನ್ನಿ. ಈ ಕಥೆ ಪುಸ್ತಕಗಳಿಗೂ ಮಿಸ್ ನಿದ್ರಾಳಿಗೂ ಎಲ್ಲಿಲ್ಲದ ನಂಟು ಇದೆಯೆಂದರೂ ಅತಿಶಯೋಕ್ತಿಯಾಗಲಾರದು.

## ವೈದ್ಯಕೀಯ ನೆರವು ವೇದಿಕೆಗೆ ದೇಣಿಗೆ

ಚೆನ್ನೈಯಲ್ಲಿ ವಾಸವಾಗಿರುವ ಶ್ರೀಮತಿ ನಿರ್ಮಲಾ ರಾವ್‌ರವರು ತಮ್ಮ ಪತಿ ದಿ। ಪ್ರೊ। ರಾಮಚಂದ್ರ ರಾಯರ ನೆನಪಿನಲ್ಲಿ ವೈದ್ಯಕೀಯ ನೆರವು ವೇದಿಕೆಗೆ ರೂ.5,000/– ಧನಸಹಾಯವಿತ್ತಿದ್ದಾರೆ. ಅವರು ಕಳೆದ 3 ವರ್ಷಗಳಿಂದ ಈ ನಿಧಿಗೆ ದೇಣಿಗೆ ನೀಡುತ್ತಿರುವುದನ್ನು ಸಂಘವು ಕೃತಜ್ಞತೆಗಳೊಂದಿಗೆ ಸ್ಮರಿಸಿಕೊಳ್ಳುತ್ತದೆ.

## ಗೃಹಪ್ರವೇಶ

ಶ್ರೀಮತಿ ದೀಪಾ ಮತ್ತು ಆಳುಗ್ಗೇಲು, ಹಿರಿಯಡ್ಕ ಶ್ರೀ ರಮೇಶ ರಾವ್ ಇವರು ಉಡುಪಿ ಕುಕ್ಕಿಕಟ್ಟೆಯಲ್ಲಿ ನೂತನವಾಗಿ ನಿರ್ಮಿಸಿರುವ ಗೃಹ 'ಮೇಘ' ಇದರ ಪ್ರವೇಶೋತ್ಸವನ್ನು 18–11–2012ರಂದು ನೆರವೇರಿಸಿದರು.

## ವಿದೇಶ ಪ್ರಯಾಣ

ಕೂಳೂರಿನಲ್ಲಿ ವಾಸ್ತವ್ಯವಿರುವ ಶ್ರೀಮತಿ ಪುಷ್ಪಾವತಿ (ಸಹಶಿಕ್ಷಕಿ, ಸರಕಾರಿ ಹಿರಿಯ ಪ್ರಥಮಿಕ ಶಾಲೆ, ಕುಳಾಯಿ) ಮತ್ತು ಐ ಶ್ರೀನಿವಾಸ ರಾವ್‌ರವರು ದಿ.25–11–2012ರಂದು U.S.A ಯ ಪ್ಲ್ಯಾರಿಡಾದ ಮಯಾಮಿಯಲ್ಲಿರುವ ಮಗಳು ಶ್ರೀಮತಿ ಸೌಮ್ಯ ಹಾಗೂ ಅಳಿಯ ರಾಮ ಪ್ರಸಾದರಲ್ಲಿಗೆ ಪ್ರಯಾಣ ಕೈಗೊಂಡಿದ್ದು ಮಗಳ ಬಾಣಂತಿತನಕ್ಕಾಗಿ ವಾಸ್ತವ್ಯವಿರುತ್ತಾರೆ.

## ನಾಮಕರಣ

ಕರ್ವಾಲು ಆದರ್ಶ ಕುಮಾರ್ ಹಾಗೂ ಶ್ರೀಮತಿ ರಶ್ಮೀ ದಂಪತಿಗಳ ಗಂಡು ಮಗುವಿನ (ಆರುಷ್) ನಾಮಕರಣವನ್ನು ದಿನಾಂಕ 2–11–12ರಂದು ಇನ್ನಾ ಕಲ್ಲಟ್ಟ ಶೇಷಾದಿ ರಾವ್‌ರವರ ಮನೆಯಲ್ಲಿ ಬಂಧು ಬಾಂಧವರೊಡಗೂಡಿ ವಿಜೃಂಭಣೆಯಿಂದ ನೆರವೇರಿಸಿದರು.

## ಇನ್ನಾ ಕಲ್ಲಟ್ಟ ಶೇಷಾದ್ರಿ ರಾವ್ ರವರ ಷಷ್ಠ್ಯಬ್ಧಿ ಸಮಾರಂಭ

ಇನ್ನಾ ಕಲ್ಲಟ್ಟದಲ್ಲಿರುವ ಶ್ರೀ ಶೇಷಾದ್ರಿ ರಾವ್‌ರವರು ತನ್ನ ಷಷ್ಠ್ಯಬ್ಧಿ ಪೂರ್ತಿ ಸಮಾರಂಭವನ್ನು ದಿನಾಂಕ 4–11–12ರಂದು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನ ಕೋರಿಕೆ ಬೆಟ್ಟು ಇಲ್ಲಿನ ಸಭಾಂಗಣದಲ್ಲಿ ಪತ್ನಿ ಶ್ರೀಮತಿ ಜಲಜಾಕ್ಷಿ ಮತ್ತು ಮಕ್ಕಳೊಂದಿಗೆ ಬಂಧು ಬಾಂಧವರನ್ನು ಆಮಂತ್ರಿಸಿ ನೆರವೇರಿಸಿದರು.

## ವಿಳಾಸ ಬದಲಾವಣೆ

**ಪಿ. ಸುರೇಶ್ ರಾವ್**
ನಂ.465, "ಶ್ರೀದೇವಿ ಕೃಪ"
2ನೇ ಮುಖ್ಯರಸ್ತೆ, 16ನೇ ಅಡ್ಡರಸ್ತೆ,
CQAL ಲೇಔಟ್, ಸಹಕಾರ ನಗರ (ಅಂಚೆ)
ಬೆಂಗಳೂರು–560092.
ಮೊಬೈಲ್ : 9448689353

## ನಿಧನ

### ರಾಮಕೃಷ್ಣ ಅಧಿಕಾರಿ

ಸ್ವಾತಂತ್ರ್ಯ ಹೋರಾಟಗಾರ ಮಡಂತ್ಯಾರಿನ ಪಾರೆಂಕಿ ನಿವಾಸಿ ಶ್ರೀ ರಾಮಕೃಷ್ಣ ಅಧಿಕಾರಿ (91 ವರ್ಷ) ನವಂಬರ 25ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಮೂವರು ಪುತ್ರಿಯರು ಇಬ್ಬರು ಪುತ್ರರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ಮಾಂಗಲ್ಯಂ ತಂತುನಾನೇನ ....

ಉಳಿಯಾರು ಮಜೂರು ಶ್ರೀಮತಿ ಕುಮಾರಿ ಮತ್ತು ಶ್ರೀ ಹೆಚ್. ಮಲ್ಲಿಕಾರ್ಜುನ ರಾವ್ ಇವರ ಪುತ್ರಿ **ರಶ್ಮಿ** ಹಾಗೂ ಬೆಟ್ಟಂಪಾಡಿ ಶ್ರೀಮತಿ ಇಂದಿರಾ ಮತ್ತು ಶ್ರೀ ಶಿವರಾಮರಾಯರ ಪುತ್ರ **ಶಶಿಕಾಂತ** ಇವರ ವಿವಾಹ ತಾ.11-11-2012ರಂದು ಎರ್ಮಾಳು ಶ್ರೀ ಜನಾರ್ದನ ಜನ ಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮತ್ತು ಶ್ರೀ ನೂಂಜ ಉಮಾನಾಥರಾಯರ ಪುತ್ರ **ಗುರುಪ್ರಸಾದ** ಹಾಗೂ ಕೆಮ್ಮಣ್ಣು ಶ್ರೀಮತಿ ಮತ್ತು ಶ್ರೀ ಅಣ್ಣಾಜಿರಾಯರ ಪುತ್ರಿ **ಮೇಘ** ಇವರ ವಿವಾಹವು ತಾ.11-11-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಪುತ್ತೂರು ತೆಂಕಿಲ ಶ್ರೀ ಕೆ. ಕೃಷ್ಣರಾವ್ ಮತ್ತು ಶ್ರೀಮತಿ ವಿಮಲ ಕೆ. ರಾವ್ ಇವರ ಪುತ್ರ **ಶ್ರೀನಿವಾಸ** ಹಾಗೂ ಆಲೆವೂರು ಶ್ರೀ ಭಾಗ್ಯಚಂದ್ರ ರಾವ್ ಮತ್ತು ಶ್ರೀಮತಿ ಲತಾ ಇವರ ಪುತ್ರಿ **ಪ್ರಿಯಾಂಕ** ಇವರ ವಿವಾಹವು ತಾ.23-11-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಚಿಪ್ಪಾರು ಗ್ರಾಮದ ಹಿರಣ್ಯ ಮಹಾಲಿಂಗ ಭಟ್ಟರ ಪುತ್ರ **ಪ್ರಮೋದ** ಹಾಗೂ ಮಾಂಟ್ರಾಡಿ ಸುಪ್ರಿಯ ಹಾಗೂ ಹರೀಶ ರಾಯರ ಪುತ್ರಿ **ಅಮೃತ** ಇವರ ವಿವಾಹವು ತಾ.25-11-2012ರಂದು ಮಂಗಳೂರು ಶಕ್ತಿನಗರದ ಶ್ರೀ ಗೋಪಾಲ ಕೃಷ್ಣ ದೇವಸ್ಥಾನದ ಸುಧರ್ಮ ಸಭಾಭವನದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮೀರಾ ಮತ್ತು ದಿವಂಗತ ನರೇಂದ್ರ ರಾವ್ ಇವರ ಪುತ್ರ **ಚಂದನ್** ಹಾಗೂ ಶ್ರೀಮತಿ ಎಸ್. ರಮಾ ಮತ್ತು ಶ್ರೀ ಎಸ್. ರಮೇಶ ಇವರ ಪುತ್ರಿ **ರೇಖಾ** ಇವರ ವಿವಾಹವು ತಾ.29-11-2012ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ವಾಣಿ ಜಯರಾಮ ಶರ್ಮ ಮತ್ತು ಶ್ರೀ ಎಮ್ ಜಯರಾಮ ಶರ್ಮ ಇವರ ಪುತ್ರ **ದಿಲೀಪ** ಹಾಗೂ ಶ್ರೀಮತಿ ಪೂನಂ ಸಾಹು ಮತ್ತು ಶ್ರೀ ಪುರುಷೋತ್ತಮ ಕುಮಾರ ಸಾಹು ಕಾನಪುರ ಇವರ ಪುತ್ರಿ **ಸ್ನೇಹಾ** ವಿವಾಹವು ತಾ.30-11-2012ರಂದು ಜ್ಞಾನಶಕ್ತಿ ಕಲ್ಯಾಣ ಮಂಟಪ, ಜ್ಞಾನಶಕ್ತಿ ನಗರ ಕೋಡಿಗೆ ಹಳ್ಳಿ, ವಿಶ್ವನಿದಂ ಬೆಂಗಳೂರಿನಲ್ಲಿ ನೆರವೇರಿತು.

★★★ ★★★

ಜಲಗಾಂವ್ ಜಿಲ್ಲೆ ರಾವೇರಿ ತಾಲೂಕಿನ ಪಿಂಪ್ರಿ ಗ್ರಾಮ ವಾಸಿ ಶ್ರೀಮತಿ ಮತ್ತು ಶ್ರೀ ಭರತ್ ಶಿವರಾವ್ ಮಹಾಜನ್ ಇವರ ಪುತ್ರ **ಡಾ। ಕಲ್ಪೇಶ್ ಮಹಾಜನ್** ಹಾಗೂ ಹಿರಿಯಡ್ಕ ಅಳುಗ್ಗೇಲು ಶ್ರೀಮತಿ ಮತ್ತು ಶ್ರೀ ಕೇಶವ ರಾಯರ ಪುತ್ರಿ **ಡಾ। ದೀಪ್ತಿ** ಇವರ ವಿವಾಹವು 7-12-2012ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಗೀತಾ ಮತ್ತು ಶ್ರೀ ರಾಧಾಕೃಷ್ಣ ಪಿಲಿಂಜ ಇವರ ಪುತ್ರ **ನಿಶಾಂತ** ಹಾಗೂ ಶ್ರೀಮತಿ ಕೈಲಾಶ್ ಮತ್ತು ಶ್ರೀ ಅಶೋಕ ರಾಮಲಾಲ್ ಗಜ್ಜರ್ ಇವರ ಪುತ್ರಿ **ವಿಜೇತ** ಇವರ ವಿವಾಹವು ತಾ.09-12-2012ರಂದು ಹೋಟೇಲ್ ಯೋಗಿ ಎಕ್ಸಿಕ್ಯೂಟಿವ್, ಪ್ಲಾಟ್ ನಂ.31/ಎ, ಎಪಿಎಂಸಿ ರೋಡ್, ಸೆಕ್ಟರ್ 24, ವಾಶಿ, ನವೀ ಮುಂಬಯಿ ಇಲ್ಲಿ ನೆರವೇರಿತು.

## ಧನು ಮಾಸದ ವಿಶೇಷ ದಿನಗಳು

| | |
|---|---|
| 18-12-2012 | ಸುಬ್ರಹ್ಮಣ್ಯ ಷಷ್ಠಿ |
| 23-12-2012 | ಏಕಾದಶಿ |
| 28-12-2012 | ಹುಣ್ಣಿಮೆ |
| 01-01-2013 | ಸಂಕಷ್ಟಹರ ಚೌತಿ |
| 08-01-2013 | ಏಕಾದಶಿ |
| 11-01-2013 | ಎಳ್ಳಮಾವಾಸ್ಯೆ |
| 14-01-2013 | ಮಕರ ಸಂಕ್ರಮಣ |

# ವೈದ್ಯಕೀಯ ವೇದಿಕೆ–ಪ್ರಶ್ನೆ ಮತ್ತು ಉತ್ತರ



**ಪ್ರಶ್ನೆ : ಅಸಿಡಿಟಿ (acidity) ಎಂದರೇನು? ಇದಕ್ಕೆ ಕಾರಣಗಳೇನು? ಇದರ ಚಿಕಿತ್ಸೆ ಹೇಗೆ?** ಡಾ। ವೈ. ಸುದರ್ಶನ ರಾವ್

**ಉತ್ತರ :** ಬಾಯಿಯಿಂದ ನುಂಗಿದ ಆಹಾರವು ಅನ್ನನಾಳದ ಮೂಲಕ ಜಠರಕ್ಕೆ ಹೋಗುತ್ತದೆ. ಈ ಜಠರದಲ್ಲಿ ತಿಂದ ಆಹಾರವು ಸುಮಾರು ಆರು ಗಂಟೆಗಳ ಕಾಲ ಇರುತ್ತದೆ. ಈ ಸಮಯದಲ್ಲಿ ಜಠರವು ಈ ಅಹಾರವನ್ನು ಹಿಂಡಿ ಹಿಚುಕಿ ದ್ರವರೂಪಕ್ಕೆ ತರುತ್ತದೆ. ಅಲ್ಲದೆ ಕೆಲವು ಕಿಣ್ವಗಳ'ನ್ನು ಸ್ರವಿಸಿ ಅಹಾರವು ಮುಂದೆ ಕರುಳಿನಲ್ಲಿ ಜೀರ್ಣವಾಗಲು ಸುಲಭವಾಗುವಂತೆ ಮೆದುವಾಗಿಸಿಕೊಡುತ್ತದೆ. ಜಠರದಲ್ಲಿ ಆಹಾರ ಇರುವಷ್ಟು ಹೊತ್ತು ನಮಗೆ ಹಸಿವೆಯ ಅನುಭವವಾಗುವುದಿಲ್ಲ. ಜಠರ ಖಾಲಿಯಾದಾಗ ಅದರಲ್ಲಿರುವ ನರಾಗ್ರಗಳ ಮೂಲಕ ಮೆದುಳಿಗೆ ಜಠರವು ಖಾಲಿಯಾಗಿರುವ ಸಂದೇಶ ತಲುಪಿದಾಗ ನಮಗೆ ಹಸಿವೆಯಾದ ಅನುಭವವಾಗುತ್ತದೆ. ಅಹಾರ ಜೀರ್ಣವಾಗಲು ಹಾಗೂ ಮೆದುವಾಗಲು ಜಠರದಲ್ಲಿ ಹೈಡ್ರೋಕ್ಲೋರಿಕ್ ಎಂಬ ಆಮ್ಲವನ್ನು ಜಠರದ ಗೋಡೆಗಳಲ್ಲಿರುವ ಜೀವಕೋಶಗಳು ತಯಾರಿಸಿ ಸ್ರವಿಸುತ್ತವೆ. ಹಸಿವೆಯ ಅನುಭವವಾದಾಗ ಮೆದುಳು ಈ ಜೀವಕೋಶಗಳಿಗೆ ಸಂದೇಶ ಕಳುಹಿಸಿ ಈ ಆಮ್ಲವನ್ನು ಸ್ರವಿಸಲು ಸೂಚನೆಕೊಡುತ್ತದೆ, ಹೀಗೆ ಜಠರದಲ್ಲಿ ಈ ಆಮ್ಲದ ಸ್ರಾವವು ಮುಂದೆ ಹೊಟ್ಟೆಗೆ ಬರುವ ಅಹಾರವನ್ನು ಜೀರ್ಣಗೊಳಿಸುವ ಪ್ರಕ್ರಿಯೆಯ ಪೂರ್ವಭಾವಿ ಸಿದ್ಧತೆಯಾಗಿದೆ. ಕೆಲವರಿಗೆ ಕಾಡಿಸುವ ಅಸಿಡಿಟಿ ಎಂಬ ಖಾಯಿಲೆಯ ಮೂಲವೇ ಈ ಹೈಡ್ರೋಕ್ಲೋರಿಕ್ ಆಮ್ಲ.

ಅಮ್ಲ ನಿಮೆಗಲ್ಲರಿಗೂ ತಿಳಿದಂತೆ ಹುಳಿ ರುಚಿಯುಳ್ಳದ್ದು ಹಾಗೂ ಸುಡುವ ಸ್ವಭಾವವುಳ್ಳದ್ದು . ಈ ಆಮ್ಲವು ಜಠರಕ್ಕೆ ಪಚನಕ್ರಿಯೆಗೆ ಎಷ್ಟು ಅಗತ್ಯವೋ ಅಷ್ಟೇ ಅದರ ಸುಡುವ ಗುಣವೂ ಅಪಾಯಕಾರಿಯಾಗಿದೆ. ಇದರಿಂದ ರಕ್ಷಿಸಿಕೊಳ್ಳಲು ಜಠರದ ಗೋಡೆಯಲ್ಲಿರುವ ಕೆಲವು ಜೀವಕೋಶಗಳು ಪ್ರತ್ಯಾಮ್ಲ ಗುಣವುಳ್ಳ(alkaline), ಸಿಂಬಳದಂತಹಾ ಪದಾರ್ಥವನ್ನು ಸ್ರವಿಸಿ ಜಠರದ ಗೋಡೆಗೆ ಲೇಪಿಸುತ್ತವೆ. ಈ ಲೇಪನವು ಜಠರದ ಗೋಡೆಯನ್ನು ಹೈಡ್ರೋಕ್ಲೋರಿಕ್ ಆಮ್ಲದಿಂದ ಸುಟ್ಟು ಹೋಗದಂತೆ ಕಾಪಾಡುತ್ತದೆ. ಅಷ್ಟೇ ಅಲ್ಲದೆ ಸೇವಿಸಿದ ಆಹಾರವು ಈ ಆಮ್ಲದೊಂದಿಗೆ ಮಿಶ್ರಣವಾಗುವುದರಿಂದ ಅದರ ತೀಕ್ಷ್ಣತೆಯನ್ನು ಕಡಿಮೆಯಾಗುತ್ತದೆ. ಹೀಗೆ ನಾವು ತಿಂದ ಆಹಾರ ಹಾಗೂ ಜಠರದ ಗೊಡೆಗಳ ಲೇಪನ ಇವೆರಡು, ಹೈಡ್ರೋಕ್ಲೋರಿಕ್ ಆಮ್ಲದ ಉಪಯೋಗವನ್ನು ಪಡೆದುಕೊಂಡು, ಅದರಿಂದ ನಮ್ಮ ಜಠರಕ್ಕೆ ಹಾನಿಯಾಗದಂತೆ ನೋಡಿಕೊಳ್ಳುತ್ತವೆ.

ಹಸಿವಾದಾಗ ಈ ಆಮ್ಲವು ಜಠರದಲ್ಲಿ ಸ್ರವಿಸಬೇಕಾದ್ದು ಮಾಮೂಲಿ ಪ್ರಕ್ರಿಯೆ. ಆದರೆ ಕೆಲವು ಸಂದರ್ಭಗಳಲ್ಲಿ ಜಠರದಲ್ಲಿ ಈ ಆಮ್ಲವು ಅಗತ್ಯಕ್ಕಿಂತ ಹೆಚ್ಚು ಸ್ರಾವವಾಗುತ್ತದೆ. ಉದಾ:ಮಾನಸಿಕ ಒತ್ತಡ ಹೆಚ್ಚಾದಾಗ, ನಿದ್ದೆಕೆಡುವುದು, ಸಿಗರೇಟು ಸೇವನೆ ಹಾಗೂ ಕೆಲವು ಔಷಧಗಳ ಸೇವನೆ. ಹೀಗೆ ಅಗತ್ಯಕ್ಕಿಂತ ಹೆಚ್ಚು ಆಮ್ಲ ಸ್ರಾವವಾದರೆ ಜಠರದ ಗೋಡೆಗಳಿಗೆ ಹಾನಿಯಾಗುತ್ತದೆ. ಹೊಟ್ಟೆ ಖಾಲಿಯಾದಾಗ ಆಹಾರ ಸೇವಿಸದಿರುವುದು, ಸೇವಿಸಿದರೂ ಹುಳಿಪದಾರ್ಥ (ಜ್ಯೂಸ್), ಖಾರ, ಮಸಾಲೆ, ಎಣ್ಣೆ, ಬೆಣ್ಣೆ, ಮಾಂಸಾಹಾರ, ಕಾಫಿ, ಚಹಾ, ಮದ್ಯಪಾನ ಸೇವಿಸುವುದು ಇವೆಲ್ಲವೂ ಅಮ್ಲದ ಸ್ರಾವವನ್ನು ಹೆಚ್ಚಿಸುವುದು ಮಾತ್ರವಲ್ಲ ಸ್ವತಃ ಜಠರದ ಗೋಡೆಗೆ ಹಾನಿ ಮಾಡುತ್ತವೆ.

ಅಮ್ಲದಿಂದಾಗಿ ಜಠರದ ಗೋಡೆ ಸುಟ್ಟು ಕೆಂಪಗಾಗುತ್ತದೆ, ಬಾತುಕೊಳ್ಳುತ್ತದೆ ಇನ್ನೂ ತೀವ್ರವಾದರೆ ಗಾಯವಾಗುತ್ತದೆ. ಅಸಿಡಿಟಿಯಿಂದಾಗಿ ಜಠರ ಮಾತ್ರವಲ್ಲ ಅನ್ನನಾಳ ಹಾಗೂ ಕರುಳಿನ ಗೋಡೆಗಳಿಗೂ ಇದೇ ರೀತಿ ಹಾನಿಯಾಗಬಹುದು. ಜಠರದ ಗೋಡೆಗಳು ಬಾತುಕೊಳ್ಳುವುದನ್ನು ಗ್ಯಾಸ್ಟ್ರೈಟಿಸ್ ಎಂದೂ ಅನ್ನನಾಳದ ಗೋಡೆಗಳು ಬಾತುಕೊಳ್ಳುವುದನ್ನು ಇಸೋಫೇಜೈಟಿಸ್ ಎಂದೂ, ಕರುಳು ಬಾತುಕೊಳ್ಳುವುದನ್ನು ಡ್ಯುಯೋಡಿನೈಟಿಸ್ ಎಂದು ಕರೆಯುತ್ತೇವೆ, ಸಣ್ಣಸಣ್ಣ ಗಾಯಗಳಾದರೆ ಇರೋಶನ್ (erosions) ಎಂದೂ, ದೊಡ್ಡದಾದರೆ ಅಲ್ಸರ್ (ಹುಣ್ಣು) ಎಂದೂ ಕರೆಯುತ್ತೇವೆ. ಈ ತರಹ ಹುಣ್ಣುಗಳಾದರೆ ಅದರಲ್ಲಿ ಹೆಚ್. ಪೈಲೋರಿ ಎಂಬ ಬ್ಯಾಕ್ಟೀರಿಯಾವೊಂದು ಬೆಳೆಯುತ್ತದೆ ಹಾಗೂ ಅದು ಹುಣ್ಣು ಗುಣವಾಗದಂತೆ ತಡೆಯುತ್ತದೆ.

ಹೊಟ್ಟೆಯಲ್ಲಿ ಬೆಂಕಿ ಹಾಕಿ ಸುಡುವ ಅನುಭವವಾಗುವುದು ಅಸಿಡಿಟಿ ಖಾಯಿಲೆಯ ಮುಖ್ಯಚಿಹ್ನೆ. ಈ ಸುಡುವ ಅನುಭವವು ಹೊಟ್ಟೆಯ ಮೇಲ್ಭಾಗದಲ್ಲಿರುತ್ತದೆ. ಆರಂಭದಲ್ಲಿ ಹೊಟ್ಟೆ ಖಾಲಿಯಾದಾಗ ಮಾತ್ರ ಈ ಚಿಹ್ನೆಯಿದ್ದರೆ ಇನ್ನು ಕಾಯಿಲೆ ತೀವ್ರವಾದಂತೆ ದಿನವಿಡೀ ಇರಬಹುದು. ಈ ಸುಡುವ ಅನುಭವವು ಎದೆಗೂ ವ್ಯಾಪಿಸಬಹುದು. ಹುಳಿತೇಗು, ಹೊಟ್ಟೆನೋವು, ವಾಂತಿ, ಊಟ ಮಾಡಿದ ಮೇಲೆ ಹೊಟ್ಟೆನೋವು ಜಾಸ್ತಿಯಾಗುವುದು ಇವೆಲ್ಲ ಖಾಯಿಲೆ ತೀವ್ರವಾಗಿರುವ ಸೂಚನೆಗಳು. ವಿಪರೀತ ಹೊಟ್ಟೆನೋವು ಹಾಗು ರಕ್ತವಾಂತಿ/ಬೇಧಿಯು ಜಠರ/ಕರುಳಿನಲ್ಲಿ ಗಾಯಗಳಾಗಿರುವ ಸೂಚನೆಗಳು. ಆದರೆ ಕೆಲವರಲ್ಲಿ ಚಿಹ್ನೆಗಳು ಕಡಿಮೆ ಇದ್ದು ಜಠರದಲ್ಲಿ ಹುಣ್ಣುಗಳಾಗಿ ಕಾಯಿಲೆ ತೀವ್ರವಾಗಿರುವುದೂ ಸಾಧ್ಯವಿದೆ. ಅಸಿಡಿಟಿ ಖಾಯಿಲೆಯು ವಯೋಮಾನ ಬೇಧವಿಲ್ಲದೆ ಎಲ್ಲರನ್ನೂ ಕಾಡುತ್ತದೆ. ಆದರೂ ಯುವಕರು ಹಾಗೂ ಮಧ್ಯವಯಸ್ಕರಲ್ಲಿ ಇದು ಸಾಮಾನ್ಯ.

ಬಾಯಿಯ ಮುಖಾಂತರ ಹೊಟ್ಟೆಯೊಳಕ್ಕೆ ಎಂಡೋಸ್ಕೋಪಿ ಎಂಬ ಉಪಕರಣವನ್ನು ತೂರಿಸಿ ಜಠರದ ಒಳಗೋಡೆಯನ್ನು ವೀಕ್ಷಿಸುವ ಗ್ಯಾಸ್ಟ್ರೋಸ್ಕೋಪಿ ಪರೀಕ್ಷೆಯು ಈ ಖಾಯಿಲೆಯನ್ನು ಪತ್ತೆಹಚ್ಚಲು ಅತ್ಯುತ್ತಮ, ಸರಳ ಹಾಗೂ ಕರಾರುವಾಕ್ಕಾದ ವಿಧಾನ. ಅಸಿಡಿಟಿಯ ಚಿಹ್ನೆಗಳ ಹಿಂದೆ ಅಡಗಿರಬಹುದಾದ ಅನೇಕ ಹೊಟ್ಟೆಯ ಇತರ ಖಾಯಿಲೆಗಳ ಬಗ್ಗೆ ವೈದ್ಯರಿಗೆ ಸಂಶಯವಿದ್ದರೆ ಅವರು ಇನ್ನೂ ಅನೇಕ ತಪಾಸಣೆಗಳನ್ನು ಮಾಡಿಯಾರು.

ಅಸಿಡಿಟಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ಹಾಗೂ ಹುಣ್ಣುಗಳನ್ನು ಗುಣಪಡಿಸಲು ಅತ್ಯುತ್ತಮ ಔಷಧಿಗಳಿವೆ. ಒಂದು ಕಾಲದಲ್ಲಿ ಜಠರದ ಹಾಗೂ ಕರುಳಿನಲ್ಲಾದ ಹುಣ್ಣುಗಳನ್ನು ಗುಣಪಡಿಸಲು ಶಸ್ತ್ರಚಿಕಿತ್ಸೆಯೇ ಅನಿವಾರ್ಯವೆಂದಿತ್ತು. ಆದರೆ ಈಗ ಹುಣ್ಣುಗಳನ್ನು ಗುಣಪಡಿಸಲು ಪರಿಣಾಮಕಾರಿ ಔಷಧಿಗಳಿವೆ.

ಅಸಿಡಿಟಿ ಕಾಯಿಲೆ ಪದೇ ಪದೇ ಮರುಕಳಿಸುವುದು ಸಾಮಾನ್ಯ. ಇದನ್ನು ತಡೆಗಟ್ಟಲು ನಮ್ಮ ಜೀವನಶೈಲಿಯಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುವುದು ಅತೀಮುಖ್ಯ. ಉದಾಹರಣೆಗೆ ಸಮಯಕ್ಕೆ ಸರಿಯಾಗಿ ಆಹಾರ ಸೇವಿಸುವುದು, ವ್ಯಾಯಾಮ, ಸರಿಯಾದ ಸಮಯದಲ್ಲಿ ನಿದ್ದೆ, ದುಶ್ಚಟಗಳಿಂದ ದೂರವಿರುವುದು ಇತ್ಯಾದಿ. ಇನ್ನು ಸೇವಿಸುವ ಆಹಾರದಲ್ಲಿ ಖಾರ, ಮಸಾಲೆ , ಕೊಬ್ಬು ಕಡಿಮೆ ಇರಬೇಕು. ಮಾಂಸಾಹಾರಕ್ಕಿಂತ ಸಸ್ಯಾಹಾರಉತ್ತಮ. ಹಣ್ಣುಗಳಲ್ಲಿ ಸಿಟ್ರಸ್ ಜಾತಿಯ ಹಣ್ಣುಗಳಾದ ಲಿಂಬೆ, ಮುಸಂಬಿ ಹಾಗೂ ಕಿತ್ತಳೆಗಳಿಗಿಂತ ಬಾಳೆಹಣ್ಣು, ಸೇಬು ಉತ್ತಮ. ಹಾಲು ಹಾಗೂ ಎಳನೀರು ಹೊಟ್ಟೆಗೆ ತಂಪನ್ನೆರೆಯುತ್ತವೆ. ಅಸಿಡಿಟಿಯನ್ನು ಹೆಚ್ಚಿಸುವಲ್ಲಿ ಕೆಲವು ಔಷಧಗಳ ಪಾತ್ರವನ್ನು ಮರೆಯಲಾಗದು. ಮುಖ್ಯವಾಗಿ ನೋವುನಿವಾರಕ ಔಷಧಗಳು. ಈ ಔಷಧಗಳ ಸತತ ಸೇವನೆಯಿಂದಲೂ ಜಠರ ಹಾಗೂ ಕರುಳಿನಲ್ಲಿ ಹುಣ್ಣುಗಳಾಗುತ್ತವೆ. ಇಂತಹಾ ಔಷಧಗಳನ್ನು ಅನಗತ್ಯವಾಗಿ ಸೇವಿಸಬಾರದು. ಸೇವಿಸಿದರೂ ಊಟದ ನಂತರ ಸೇವಿಸಿ ಅದರೊಂದಿಗೆ ಅಸಿಡಿಟಿಯನ್ನು ಕಡಿಮೆ ಮಾಡುವ ಔಷಧವನ್ನೂ ಸೇವಿಸಬೇಕು.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

## ಶ್ರೀ ಕ್ಷೇತ್ರ ಪಾವಂಜೆಯಲ್ಲಿ ಕಿಶೋರರಿಂದ ಅದ್ಭುತ ಯಕ್ಷಗಾನ ಬಯಲಾಟ ಪ್ರದರ್ಶನ : ವೀರ ಬಭ್ರುವಾಹನ

ತಾ.16-10-2012ರಂದು ಕಲಾ ಪೋಷಣೆಯ ಉದ್ದೇಶದಿಂದ ಶ್ರೀಕ್ಷೇತ್ರದ ಶ್ರೀ ಶಾರದ್ವತ ಯಜ್ಞಾಂಗಣದ ನವೀಕೃತ ವೇದಿಕೆಯಲ್ಲಿ ಸಾಲಿಗ್ರಾಮದ ಮಕ್ಕಳ ಮೇಳದ ಯಕ್ಷಗಾನ ಪ್ರದರ್ಶನವನ್ನು ಹಮ್ಮಿಕೊಳ್ಳಲಾಯಿತು. ಶಿಸ್ತುಬದ್ಧವಾದ ನಾಟ್ಯ, ಕುಣಿತಗಳಲ್ಲದೆ ನಿರರ್ಗಳವಾದ ಮಾತುಗಳಿಂದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದ ಬಾಲಕರು ವೃತ್ತಿಪರ ಮೇಳದ ಕಲಾವಿದರಿಗೆ ಕಡಿಮೆಯಿಲ್ಲದಂತೆ ಪ್ರದರ್ಶನವನ್ನು ನಡೆಸಿಕೊಟ್ಟರು. 11 ವರ್ಷ ಪ್ರಾಯದ ಸುಹಾಸನ ಬಭ್ರುವಾಹನ, ಮುದ್ದು ಮುಖದ ಚಿತ್ರಾಂಗದೆ ಹಾಗೂ ಸಖಿಯರು ಹಾಗೂ ಕೃಷ್ಣ ಪಾತ್ರಧಾರಿಗಳಂತೂ ಪ್ರೇಕ್ಷಕರ ಮನಸೂರೆಗೊಂಡರು. ವರದಿ : **ಸ್ಕಂದಸ್ವಾಮಿ, ಮುಕ್ಕ.**

## ಪುಣ್ಯಸ್ಮರಣೆ



ಜನನ : 04-02-1946 | ನಿಧನ : 20-12-2007

### ಶ್ರೀಮತಿ ಕುಸುಮ ಗೋವಿಂದ ರಾವ್, ಕರಾಡ

ನೀವು ನಮ್ಮನ್ನಗಲಿ 5 ವರ್ಷ ಕಳೆದರೂ ನಿಮ್ಮ ನೆನಪು ಹಸಿರಾಗಿದ್ದು ನಿಮ್ಮ ಆದರ್ಶ, ಸದ್ಗುಣ ಸಂಪನ್ನತೆಯೇ ನಮಗೆ ದಾರಿದೀಪ. ನಿಮ್ಮನ್ನು ನಿರಂತರವೂ ಸ್ಮರಿಸುತ್ತಿರುವ,

**ವೈ. ಗೋವಿಂದ ರಾವ್ (ಪತಿ); ಮಕ್ಕಳು-ವೈ.ನಾಗರಾಜ ರಾವ್ ಮತ್ತು ಶ್ರೀಮತಿ ಸುಮಂಗಲ ಎನ್.ರಾವ್; ವೈ.ಕೃಷ್ಣರಾಜ ರಾವ್ ಮತ್ತು ಶ್ರೀಮತಿ ವೈ. ಗಾಯತ್ರಿ ಕೆ. ರಾವ್; ಶ್ರೀಮತಿ ಹೇಮಲತಾ ರಾಜೇಂದ್ರ ಕುಮಾರ್; ರಾಜೇಂದ್ರ ಗೋಪಾಲ ಕೃಷ್ಣ ರಾವ್ ಮತ್ತು ಋತುಜ; ಋಷಿಕೇಶ್; ರಕ್ಷಾ; ರಕ್ಷಿತಾ; ನಮ್ರತಾ; ಅನ್ವಿತ (ಮೊಮ್ಮಕ್ಕಳು)**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

ಶಾರದಾನಗರ, ಕುಂಜಿಬೆಟ್ಟು, ಉಡುಪಿ

### 2011-12ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಪ್ರಿಯರೇ, 18-11-2012

ಸಂಘದ ವಾರ್ಷಿಕ ಮಹಾಸಭೆಯು ತಾ.23-12-2012ನೇ ರವಿವಾರ ಪೂರ್ವಾಹ್ನ 10-30 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. 2011-2012ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
4. 2010-2011ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿ ಅಂಗೀಕಾರ
5. 2011-2012ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
6. 2011-2012ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
7. 2012-2013ನೇ ವರ್ಷಕ್ಕೆ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
8. 2012-2013ನೇ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ
9. ಅಧ್ಯಕ್ಷರ ಅನುಮತಿಯ ಮೇರೆಗೆ ಬರತಕ್ಕ ಇತರ ವಿಷಯಗಳು
10. ನೂತನ ಆಡಳಿತ ಮಂಡಳಿಯ ಆಯ್ಕೆ
11. ಧನ್ಯವಾದ ಸಮರ್ಪಣೆ

ಸಹಿ/-
**ಕಾರ್ಯದರ್ಶಿ**

ವಿ.ಸೂ. : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ತಾ.18-12-2012ರ ಸಂಜೆ 5-00 ಗಂಟೆಗೆ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಪತ್ರ ಮೂಲಕ ತಲಪಿಸಬೇಕು.

ಶ್ರೀರಾಜ ರಾಜೇಶ್ವರಿ ಪ್ರಸನ್ನ

## ಮಠದ ಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

ಕೋಡಿಂಬಾಡಿ, ಪೂತ್ತುರು ತಾಲೂಕು ದ.ಕ. ದೂರವಾಣಿ : 08251–261010 ಮೊಬೈಲ್ : 9901247080

**ಮನವಿ**

ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾದೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿದಾನಂಗಳವರ ಪರಮಾನುಗ್ರಹದೊಂದಿಗೆ ಪುತ್ತೂರು ತಾಲೂಕಿನ ಕೋಡಿಂಬಾಡಿ ಸಮೀಪವಿರುವ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಪುನರ್ ನವೀಕರಣ ಮತ್ತು ಬ್ರಹ್ಮಕಲಶೋತ್ಸವವನ್ನು ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ನೆರವೇರಿಸುವುದೆಂದು ತೀರ್ಮಾನಿಸಲಾಗಿದೆ. ನಮ್ಮ ಸಮಾಜದ ಈ ಪುರಾತನ ದೇವಾಲಯಕ್ಕೆ ಯಾವುದೇ ಆದಾಯ ಮೂಲಗಳು ಇಲ್ಲದಿರುವುದರಿಂದ ತಾವು ತನು, ಮನ, ಧನಗಳಿಂದ ಸಹಕಾರ ನೀಡಿ ಶ್ರೀ ರಾಜರಾಜೇಶ್ವರಿ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

| ಎಂ ಆರ್ ವಾಸುದೇವರಾವ್ | ಕರುಣಾಕರ ಬೆಳ್ಳೆ | ಟಿ.ಉಮೇಶ ರಾವ್ |
|---|---|---|
| ಗೌರವಾಧ್ಯಕ್ಷ | ಸಂಚಾಲಕ | ಅಧ್ಯಕ್ಷ |

ವಿ.ಸೂ. : ಧನಸಹಾಯ ಕಳುಹಿಸುವವರು ಡಿ.ಸಿ.ಸಿ. ಬ್ಯಾಂಕ್, ಪುತ್ತೂರು, ದ.ಕ. ಎಸ್.ಬಿ.ಅಕೌಂಟ್ ನಂ.3151 ಅಥವಾ ಕರ್ನಾಟಕ ಬ್ಯಾಂಕ್, ಪುತ್ತೂರು, ದ.ಕ. ಎಸ್.ಬಿ.ಅಕೌಂಟ್ ನಂ.34452 ಇಲ್ಲಿಗೆ ಚೆಕ್ ಯಾ ಡಿ.ಡಿ. ಮೂಲಕ ದೇಣಿಗೆ ನೀಡಬೇಕಾಗಿ ವಿನಂತಿ

## ಪಾಕೇಟ್ ಕ್ಯಾಲೆಂಡರ್ 2013

| | | | | | ಜನವರಿ-31 ಅಕ್ಟೋಬರ್-31 | ಮೇ-31 | ಆಗಸ್ಟ್-31 | ಫೆಬ್ರವರಿ-28 ಮಾರ್ಚ್-31 ನವೆಂಬರ್-30 | ಜೂನ್-30 | ಸೆಪ್ಟೆಂಬರ್-30 ಡಿಸೆಂಬರ್-31 | ಏಪ್ರಿಲ್-30 ಜುಲಾಯಿ-31 |
|---|---|---|---|---|---|---|---|---|---|---|---|
| 1 | 8 | 15 | 22 | 29 | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ |
| 2 | 9 | 16 | 23 | 30 | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ |
| 3 | 10 | 17 | 24 | 31 | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ |
| 4 | 11 | 18 | 25 | ★ | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು |
| 5 | 12 | 19 | 26 | ★ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ |
| 6 | 13 | 20 | 27 | ★ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| 7 | 14 | 21 | 28 | ★ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ |

01-01-2014 : ಬುಧವಾರ

ರಚನೆ : ಮ.ಮ. ಹೆಬ್ಬಾರ್, ಬೇಳಂಜೆ




ಎಮ್. ದೇವಾನಂದ್ ಭಟ್

Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.01-01-2013) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.02-01-2013 ಲಲಿತಾ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.10-01-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**




**RAJESH POWER PRESS**

PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

Celebrations
Conference & Party Hall (Air Conditioned)




Prop. : ADARSH RAO

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Rajataadri, Manipal, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org